# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜೂನ್ 29, 2021

ಸಂಪುಟ : 48 ಸಂಚಿಕೆ : 46 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ರೆಡ್ಡಿ ಸಮಾಜದ ಹಿರಿಯರಾದ ಎಸ್. ರಾಮಚಂದ್ರ ರೆಡ್ಡಿ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ 2ನೇ ಮೇನ್, 5ನೇ ಕ್ರಾಸ್ ವಾಸಿ, ದಾವಣಗೆರೆ-ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ ಮಾಜಿ ನಿರ್ದೇಶಕರೂ, ದಾವಣಗೆರೆ ಷುಗರ್ ಕಂಪನಿ ಲಿ. ಮಾಜಿ ನಿರ್ದೇಶಕರೂ, ಷುಗರ್ ಕೇನ್ ಫಾರ್ಮರ್ಸ್ ಅಸೋಸಿಯೇಷನ್‌ನ ಮಾಜಿ ಉಪಾಧ್ಯಕ್ಷರೂ, ದಾವಣಗೆರೆ ಜಿಲ್ಲಾ ರೆಡ್ಡಿ ಸಂಘದ ಮಾಜಿ ಚೇರ್‌ಮನ್, ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷರೂ, ಮಾಜಿ ಅಧ್ಯಕ್ಷರೂ, ಚಿತ್ರದುರ್ಗ ರೆಡ್ಡಿ ಸಂಘದ ಉಪಾಧ್ಯಕ್ಷರೂ, ಜಮೀನುದಾರರೂ ಆಗಿದ್ದ


**ಶ್ರೀ ಎಸ್. ರಾಮಚಂದ್ರ ರೆಡ್ಡಿ** ಅವರು

ದಿನಾಂಕ 28.06.2021ರ ಸೋಮವಾರ ಸಂಜೆ 4 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 95 ವರ್ಷ ವಯಸ್ಸಾಗಿತ್ತು. ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.06.2021ರ ಮಂಗಳವಾರ ಬೆಳಿಗ್ಗೆ 11.30 ಕ್ಕೆ ನಗರದ ರಾಜನಹಳ್ಳಿ ಬೃಂದಾವನದಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ, ಮೊ. : 97429 11957







# ಕೋವಿಡ್‌ನಿಂದ ಮೃತಪಟ್ಟವರ ಪಟ್ಟಿ ಶೀಘ್ರ ಸಲ್ಲಿಸಬೇಕು

## ಚನ್ನಗಿರಿ ತಾಲ್ಲೂಕು ಮಟ್ಟದ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್

ಚನ್ನಗಿರಿ, ಜೂ. 28 - ಕೋವಿಡ್‌ನಿಂದ ಮರಣ ಹೊಂದಿದ ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ತಾಲ್ಲೂಕಿನಲ್ಲಿ ಕೋವಿಡ್‌ನಿಂದ ಮರಣ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯ ಪಟ್ಟಿ ಸಿದ್ಧಪಡಿಸಿ, ಶೀಘ್ರ ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಅವರು ತಾಲ್ಲೂಕು ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿನ ಮೌದ್ಗಲ್ ಆಂಜನೇಯ ಸ್ವಾಮಿ ಕಲ್ಯಾಣ ಮಂದಿರದಲ್ಲಿ ಸೋಮವಾರ ಆಯೋಜಿಸಲಾಗಿದ್ದ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಹಾಗೂ ಕೋವಿಡ್-19 ನಿಯಂತ್ರಣ ಕುರಿತು ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಕೋವಿಡ್‌ನಿಂದ ಎಷ್ಟು ಜನ ಮೃತಪಟ್ಟಿದ್ದಾರೆ, ಎಂಬ ಅಂಕಿ-ಅಂಶಗಳನ್ನು ಸಮರ್ಪಕವಾಗಿ ಸಂಗ್ರಹಿಸಿ, ಮೃತಪಟ್ಟಿರುವವರ ಹೆಸರು, ವಿಳಾಸ, ಕೋವಿಡ್ ಪಾಸಿಟಿವ್ ರಾಜ್ಯ ಮಟ್ಟದ ಗುರುತು ಸಂಖ್ಯೆಯುಳ್ಳ ಮಾಹಿತಿಯ ವಿವರವಾದ ಪಟ್ಟಿಯನ್ನು ಶೀಘ್ರವೇ ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು ಎಂದು ತಾಕೀತು ಮಾಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಪ್ರಭು ಮಾತನಾಡಿ, ತಾಲ್ಲೂಕಿನಲ್ಲಿ ಒಟ್ಟು 3551 ಪಾಸಿಟಿವ್ ಪ್ರಕರಣಗಳು ದಾಖಲಾಗಿದ್ದು, 59 ಜನ ಕೋವಿಡ್‌ನಿಂದ ಮರಣ ಹೊಂದಿದ್ದಾರೆ. ತಾಲ್ಲೂಕಿನಲ್ಲಿ 5 ಕೋವಿಡ್ ಕೇರ್ ಸೆಂಟರ್‌ಗಳನ್ನು ಪ್ರಾರಂಭಿಸಲಾಗಿದ್ದು, 1544 ಜನರು ಕೋವಿಡ್ ಕೇರ್ ಸೆಂಟರ್‌ನಲ್ಲಿ ಆರೈಕೆ ಪಡೆದುಕೊಂಡಿದ್ದಾರೆ ಎಂದರು.

ತಹಶೀಲ್ದಾರ್ ಪುಟ್ಟರಾಜ ಗೌಡ ಮಾತನಾಡಿ, ಲಸಿಕೆ ಕುರಿತು ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದು, ಹೆಚ್ಚು ಜನರು ಲಸಿಕೆ ಪಡೆದುಕೊಳ್ಳಲು ಮುಂದೆ ಬರುತ್ತಿದ್ದಾರೆ. ಪಟ್ಟಣದ 23 ವಾರ್ಡ್‌ಗಳಲ್ಲಿ ಸೋಂಕು ನಿವಾರಕ ಸಿಂಪಡಿಸಲಾಗಿದ್ದು, ಪ್ರತಿನಿತ್ಯ ತಹಶೀಲ್ದಾರ್ ನೇತೃತ್ವದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ನಡೆಸುತ್ತಿದ್ದೇವೆ ಎಂದರು.

ಶಾಸಕ ಮಾಡಾಳ್ ವಿರುಪಾಕ್ಷಪ್ಪ ಮಾತನಾಡಿ, ತಜ್ಞರ ಅಭಿಪ್ರಾಯದಂತೆ ಕೋವಿಡ್‌ನ ಮೂರನೆ ಅಲೆ ಬರುವ ಸಾಧ್ಯತೆಗಳಿದ್ದು, ಮಕ್ಕಳ ಮೇಲೆ ಪರಿಣಾಮ ಬೀರುವ ಸಂಭವವಿದೆ ಎಂದಿದ್ದಾರೆ. ಹೀಗಾಗಿ ಜನರ ಪ್ರಾಣ ರಕ್ಷಣೆಗೆ ನಾವು ಆದ್ಯತೆ ನೀಡಬೇಕಿದ್ದು, ಮೂರನೇ ಅಲೆ ತಾಲ್ಲೂಕಿಗೆ ಬಾರದಂತೆ ಅಧಿಕಾರಿಗಳು ಶ್ರಮವಹಿಸಿ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದರು.

ಸಭೆಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಮಾಯಕೊಂಡ ಶಾಸಕ ಪ್ರೊ. ಲಿಂಗಣ್ಣ, ಪುರಸಭೆ ಅಧ್ಯಕ್ಷೆ ಲಕ್ಷ್ಮಿದೇವಮ್ಮ ನರಸಿಂಹಮೂರ್ತಿ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್, ಡಿಹೆಚ್‌ಒ ಡಾ.ನಾಗರಾಜ್, ಉಪವಿಭಾಗಾಧಿಕಾರಿ ಶ್ರೀಮತಿ ಮಮತ ಹೊಸಗೌಡರ್ ಸೇರಿದಂತೆ ಇನ್ನುಳಿದ ತಾಲ್ಲೂಕು ಅಧಿಕಾರಿಗಳು ಇದ್ದರು.

# ನ್ಯಾಯಾಧೀಶರು, ನ್ಯಾಯವಾದಿಗಳ ಸಂಬಂಧ ಅನ್ಯೋನ್ಯವಾಗಿರಲಿ



**ಹರಪನಹಳ್ಳಿಯ ನೂತನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ಆಶಯ**

ಹರಪನಹಳ್ಳಿ, ಜೂ.28- ನ್ಯಾಯಾಲಯದ ಕಲಾಪದಲ್ಲಿ ನ್ಯಾಯಾಧೀಶರ ಹಾಗೂ ನ್ಯಾಯವಾದಿಗಳ ಸಂಬಂಧ ಅನ್ಯೋನ್ಯವಾಗಿರಲಿ ಎಂದು ಸ್ಥಳೀಯ ನೂತನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ಆಶಯ ವ್ಯಕ್ತಪಡಿಸಿದರು.

ಪಟ್ಟಣದ ವಕೀಲರ ಸಂಘದ ಕಛೇರಿಯಲ್ಲಿ ವಕೀಲರ ಸಂಘದಿಂದ ಇಂದು ಹಮ್ಮಿಕೊಂಡಿದ್ದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ವಕೀಲರ ಹಾಗೂ ನ್ಯಾಯಾಧೀಶರ ಮಧ್ಯೆ ಅನ್ಯೋನ್ಯ ಸಂಬಂಧವಿರಬೇಕು. ನ್ಯಾಯಾಲಯದಲ್ಲಿ ಸಣ್ಣಪುಟ್ಟ ನ್ಯೂನತೆಗಳು ಕಂಡು ಬಂದಲ್ಲಿ ಅಲ್ಲಿಯೇ ಬಗೆಹರಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಈ ಹಿಂದೆ ಬೆಂಗಳೂರು, ಮಂಡ್ಯ, ಮೈಸೂರು, ಪಾಂಡವಪುರ ಸೇರಿದಂತೆ, ಅನೇಕ ತಾಲ್ಲೂಕುಗಳಲ್ಲಿ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದ ಅನುಭವ ತಮಗಿದೆ. ಹರಪನಹಳ್ಳಿ ತಾಲ್ಲೂಕು ನನಗೆ ಹೊಸದು. ನಾನು ಮ್ಯಾಪ್ ನೋಡಿ ಹರಪನಹಳ್ಳಿ ತಾಲ್ಲೂಕಿಗೆ ಬಂದಿದ್ದೇನೆ. ನ್ಯಾಯವಾದಿಗಳು ಹಾಗೂ ಸಿಬ್ಬಂದಿಯವರು ನನಗೆ ಸಹಕರಿಸಬೇಕು ಎಂದು ಭಾರತಿ ಅವರು ಕೇಳಿಕೊಂಡರು.

ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರೇಗೌಡ್ರು ಮಾತನಾಡಿ, ಈ ಹಿಂದೆ ಹಿರಿಯ ಸಿವಿಲ್ ನ್ಯಾಯಾಧೀಶರಾಗಿದ್ದ ಉಂಡಿ ಮಂಜುಳಾ ಶಿವಪ್ಪನವರು ವಕೀಲರೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ನಾವು ಕೂಡ ನಿಮ್ಮ ವೃತ್ತಿಗೆ ಚ್ಯುತಿ ಬರದಂತೆ ನಡೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸರ್ಕಾರಿ ಅಭಿಯೋಜಕರಾದ ಮೀನಾಕ್ಷಿ, ಕವಿತಾ, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ, ವಕೀಲರ ಸಂಘದ ಉಪಾಧ್ಯಕ್ಷ ಟಿ. ವೆಂಕಟೇಶ್, ಕಾರ್ಯದರ್ಶಿ ಕೆ. ಬಸವರಾಜ್, ಸಹ ಕಾರ್ಯದರ್ಶಿ ಎಂ. ಮೃತ್ಯುಂಜಯ್ಯ, ವಕೀಲರುಗಳಾದ ಗಂಗಾಧರ್ ಗುರುಮಠ್, ಎಂ. ಅಜ್ಜಪ್ಪ, ಕೆ. ಜಗದಪ್ಪ, ಪಿ. ಜಗದೀಶಗೌಡ, ಕೋಡಿಹಳ್ಳಿ ಪ್ರಕಾಶ, ಕೆ. ಬಸವರಾಜ್, ಎಸ್.ಎಂ. ರುದ್ರಮುನಿಸ್ವಾಮಿ, ಆರುಂಡಿ ನಾಗರಾಜ್, ಬಿ. ಗೋಣಿಬಸಪ್ಪ, ಪೀರ್ ಅಹಮದ್, ಇದ್ಲಿ ರಾಮಪ್ಪ, ವಾಮದೇವ, ಕೆ. ದ್ರಾಕ್ಷಾಯಣಮ್ಮ, ರೇಣುಕ ಮೇಟಿ, ಮುತ್ತಿಗಿ ಮಂಜಪ್ಪ, ರೇವಣಸಿದ್ದಪ್ಪ, ತಿರುಪತಿ, ಮಂಜಾನಾಯ್ಕ, ಡಿ. ಹನುಮಂತಪ್ಪ, ಬಾಗಳಿ ಮಂಜುನಾಥ, ಶಾಂತವೀರನಾಯ್ಕ, ಮಂಜುನಾಥ್, ಇನ್ನಿತರರಿದ್ದರು.

# ಜನರ ಬಾಳಲ್ಲಿ ಬೆಳಕು ತರುವ ಕೆಲಸ

## ಚನ್ನಗಿರಿ ತಾಲ್ಲೂಕು ಕಾಕನೂರಿನಲ್ಲಿ ಕೋವಿಡ್ ರೋಗಿಗಳ ಯೋಗಕ್ಷೇಮ ವಿಚಾರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್



ಚನ್ನಗಿರಿ, ಜೂ.28- ಪಟ್ಟಣದ ಒಳಚರಂಡಿ ವ್ಯವಸ್ಥೆಗೆ ಸರ್ಕಾರ 96 ಕೋಟಿ ಬಿಡುಗಡೆ ಮಾಡಲಾಗಿದೆ ಮತ್ತು 155 ಕೋಟಿ ರೂ. ವೆಚ್ಚದಲ್ಲಿ ನೀರಾವರಿ ಯೋಜನೆಗೆ ಹಣ ಬಿಡುಗಡೆ ಮಾಡಲಾಗಿದ್ದು, ಕ್ಷೇತ್ರದ ಜನರ ಬಾಳಲ್ಲಿ ಬೆಳಕು ತರುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ ಹೇಳಿದರು.

ತಾಲ್ಲೂಕಿನ ಕಾಕನೂರು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿನ ಕೋವಿಡ್ ಕೇರ್ ಸೆಂಟರ್ ನಲ್ಲಿ ರೋಗಿಗಳ ಯೋಗಕ್ಷೇಮ ವಿಚಾರಿಸಿ, ರೋಗಿಗಳಿಗೆ ಚ್ಯವನ್ ಪ್ರಾಶ್ ಮತ್ತು ಕಾರ್ಬಲಿಕ್ ಸೋಪ್ ಕಿಟ್ ವಿತರಿಸಿ ಅವರು ಮಾತನಾಡಿದರು.

ಚನ್ನಗಿರಿ ಕ್ಷೇತ್ರದ ಶಾಸಕರು ಹಾಗೂ ಕೆಎಸ್‌ಡಿಎಲ್ ನಿಗಮದ ಅಧ್ಯಕ್ಷರಾಗಿರುವ ಮಾಡಾಳ್ ವಿರುಪಾಕ್ಷಪ್ಪ ಅವರು ಶೇ.70 ಮೆಡಿಕೇಟೆಡ್ ಔಷಧವನ್ನು ಬಳಸಿ ತಯಾರಿ ಸಲಾದ ಕಾರ್ಬಾಲಿಕ್ ಸೋಪುಗಳನ್ನು ತಯಾರಿಸಿ ಕೋವಿಡ್ ಸೋಂಕಿತರಿಗೆ ಹಂಚುವ ಸತ್ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಮಾಡಾಳ್ ವಿರುಪಾಕ್ಷಪ್ಪ ಮಾತನಾಡಿ, ಅಧಿಕಾರಿಗಳು ಪ್ರಾಣದ ಹಂಗು ತೊರೆದು ಕೋವಿಡ್ ಸೋಂಕಿತರ ಸೇವೆ ಮಾಡಿದ್ದಾರೆ. ಇದೇ ರೀತಿ ಎಲ್ಲಾ ಅಧಿಕಾರಿಗಳು ಕೆಲಸ ಮಾಡಿದಲ್ಲಿ ಕೋವಿಡ್ ಅನ್ನು ಸಂಪೂರ್ಣ ವಾಗಿ ತೊಲಗಿಸಬಹುದು ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಣವಾಗುತ್ತಿದೆ. ಆದರೆ ಇನ್ನೂ ಸೋಂಕಿತರು ಕಂಡುಬರುತ್ತಿದ್ದಾರೆ. ಇದು ಸಂಪೂರ್ಣವಾಗಿ ಕಡಿಮೆಯಾಗಬೇಕು. ಸೋಂಕು ನಿಯಂತ್ರಣಕ್ಕೆ ಎಲ್ಲಾ ಅಧಿಕಾರಿಗಳು ಶ್ರಮವಹಿಸಬೇಕು. ಯಾರೂ ಉದಾಸೀನ ಮಾಡಬಾರದು ಎಂದರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾತನಾಡಿ, ಕೋವಿಡ್ ಕೇರ್ ಸೆಂಟರ್ ನಲ್ಲಿ ಪೌಷ್ಠಿಕಾಂಶಯುಕ್ತ ಆಹಾರದ ಜೊತೆ ಉತ್ತಮ ಗುಣಮಟ್ಟದ ಆರೈಕೆಯನ್ನು ಪಡೆದುಕೊಂಡು ವೈದ್ಯರ ಸಲಹೆ ಮತ್ತು ಚಿಕಿತ್ಸೆಯಿಂದ ಸೋಂಕಿತರು ಗುಣಮುಖರಾಗಿದ್ದಾರೆ. ಸಿ.ಎಸ್. ಆರ್ ಫಂಡ್ ನಿಂದ ಸುಮಾರು 50 ಆಕ್ಸಿಜನ್ ಕಾನ್ಸಂಟ್ರೇಟರ್ 15 ಹೊಸ ಆಕ್ಸಿಜನ್ ಸಿಲಿಂಡರ್ ಗಳನ್ನು ತಾಲ್ಲೂಕು ಆಸ್ಪತ್ರೆಗೆ ನೀಡಲಾ ಗಿದೆ. ಸದ್ಯ ಜಿಲ್ಲೆಯಲ್ಲಿ ಪಾಸಿಟಿವಿಟಿ ಪ್ರಮಾಣ ಶೇ.3.47 ಕ್ಕೆ ಇಳಿದಿದೆ ಎಂದರು.

ಡಾ. ಬಾಬು ಜಗಜೀವನ್ ರಾಮ್ ನಿಗಮದ ಅಧ್ಯಕ್ಷಹಾಗೂ ಮಾಯಕೊಂಡ ಶಾಸಕ ಪ್ರೊ.ಲಿಂಗಣ್ಣ, ಗ್ರಾಮ ಪಂಚಾಯತಿ ಅಧ್ಯಕ್ಷೆ ಭಾಗ್ಯಮ್ಮ, ಎಸ್.ಪಿ ರಿಷ್ಯಂತ್, ಸಿಇಒ ವಿಜಯ ಮಹಾಂತೇಶ ದಾನಮ್ಮನವರ್, ಎ.ಸಿ ಮಮತ, ಡಿ.ಹೆಚ್.ಒ ಡಾ.ನಾಗರಾಜ್, ನೋಡಲ್ ಆಫೀಸರ್ ಡಾ.ಮುರಳಿ, ಡಿವೈಎಸ್‌ಪಿ ಸಂತೋಷ್, ತಹಶೀಲ್ದಾರ್ ಪುಟ್ಟರಾಜುಗೌಡ ಉಪಸ್ಥಿತರಿದ್ದರು.

## ಕಾಶ್ಮೀರ, ಲಡಾಖ್ ಪ್ರತ್ಯೇಕ ದೇಶವೆಂದು ತೋರಿಸಿದ ಟ್ವಿಟ್ಟರ್

ನವದೆಹಲಿ, ಜೂ. 28 - ಟ್ವಿಟ್ಟರ್ ಸಾಮಾಜಿಕ ಜಾಲತಾಣ, ಭಾರತದ ಭೂಪಟವನ್ನು ತಪ್ಪಾಗಿ ಪ್ರಕಟಿಸಿದೆ. ಜಮ್ಮು - ಕಾಶ್ಮೀರ ಹಾಗೂ ಲಡಾಖ್‌ಗಳನ್ನು ಪ್ರತ್ಯೇಕ ದೇಶವಾಗಿ ತೋರಿಸಲಾಗಿದೆ.

ಟ್ವಿಟ್ಟರ್ ಭಾರತದ ಭೂಪಟವನ್ನು ತಪ್ಪಾಗಿ ತೋರಿಸಿರುವುದು ಇದೇ ಮೊದಲ ಬಾರಿಯೇನೂ ಅಲ್ಲ. ಈ ಹಿಂದೆ ಲೇಹ್ ಅನ್ನು ಚೀನಾದ ಭಾಗವಾಗಿ ತೋರಿಸಲಾಗಿತ್ತು.

ನೂತನ ಐ.ಟಿ. ನಿಯಮಗಳ ಜಾರಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಜೊತೆ ಸಂಘರ್ಷಕ್ಕೆ ಇಳಿದಿರುವ ಟ್ವಿಟ್ಟರ್, ಸಾಮಾಜಿಕ ಜಾಲತಾಣದ ಮಧ್ಯವರ್ತಿ ವೇದಿಕೆಯಾಗಿ ಕಾನೂನಿನಿಂದ ಹೊಂದಿದ್ದ ರಕ್ಷಣೆಯನ್ನು ಕಳೆದುಕೊಂಡಿದೆ.

## ಮಲೇಬೆನ್ನೂರು ಪುರಸಭೆ : ಕರಡು ಮತದಾರರ ಪಟ್ಟಿ ಪ್ರಕಟ

ಮಲೇಬೆನ್ನೂರು, ಜೂ.28- ಇಲ್ಲಿನ ಪುರಸಭೆಯ ಎಲ್ಲಾ 23 ವಾರ್ಡ್‌ಗಳ ಕರಡು ಮತದಾರರ ಪಟ್ಟಿಯನ್ನು ವಾರ್ಡುವಾರು ಸಿದ್ದಪಡಿಸಿ, ಸೋಮವಾರ ಪುರಸಭೆ, ನಾಡ ಕಚೇರಿ ಹಾಗೂ ಮತಗಟ್ಟೆಗಳಲ್ಲಿ ಪ್ರಚಾರ ಪಡಿಸಲಾಗಿದ್ದು, ಪರಿಶೀಲನೆಗೆ ಮುಕ್ತವಾಗಿರುತ್ತದೆ ಎಂದು ತಹಶೀಲ್ದಾರ್ ಕೆ.ಬಿ.ರಾಚಂದ್ರಪ್ಪ ತಿಳಿಸಿದ್ದಾರೆ. ಕರಡು ಮತದಾರರ ಪಟ್ಟಿಯನ್ನು ಪರಿಶೀಲಿಸಿಕೊಂಡು ಆಕ್ಷೇಪಣೆಗಳು ಇದ್ದಲ್ಲಿ ಜುಲೈ 1 ರವರೆಗೆ ನಾಡ ಕಚೇರಿಗೆ ಬಂದು ಸಲ್ಲಿಸಲು ಅವಕಾಶ ಇರುತ್ತದೆ ಎಂದು ಪಟ್ಟಣದ ಸಾರ್ವಜನಿಕರಲ್ಲಿ ತಹಶೀಲ್ದಾರ್ ಮನವಿ ಮಾಡಿದ್ದಾರೆ.


## ಬಯಲು ಶೌಚ ಮಾಡಿದಲ್ಲಿ ದಂಡ

**ಹರಪನಹಳ್ಳಿ**

ಹರಪನಹಳ್ಳಿ, ಜೂ.28- ಹರಪನಹಳ್ಳಿಯನ್ನು ಓಡಿಎಫ್ ಪಟ್ಟಣವೆಂದು ಘೋಷಿಸಲಾಗಿದ್ದು, ಮುಂದುವರೆದು, ಪ್ರಸ್ತುತ ಓಡಿಎಫ್+ ಎಂದು ಘೋಷಿಸುವ ಸಲುವಾಗಿ ಬಯಲು ಮಲ-ಮೂತ್ರ ವಿಸರ್ಜನೆ ಮಾಡುವುದನ್ನು ನಿಷೇಧಿಸಲಾಗಿದೆ.

ನಾಗರಿಕರು ಬಯಲು ಶೌಚಾಲಯ ಮಾಡುವುದು ಕಂಡು ಬಂದಲ್ಲಿ ಪುರಸಭೆ ದಂಡ ವಿಧಿಸಲಿದೆ. ಮೊದಲ ಬಾರಿ 50 ರೂಪಾಯಿ, ಎರಡನೇ ಬಾರಿ 100 ರೂಪಾಯಿ ದಂಡ ವಿಧಿಸಲಾಗುವುದು. ಸಾರ್ವಜನಿಕರು ನಿಯಮ ಪಾಲಿಸುವ ಮೂಲಕ ಪಟ್ಟಣವನ್ನು ಓಡಿಎಫ್+ ಎಂದು ಘೋಷಿಸುವಲ್ಲಿ ಸಹಕಾರ ನೀಡುವಂತೆ ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತಕರ್, ಮುಖ್ಯಾಧಿಕಾರಿ ಬಿ.ಆರ್. ನಾಗರಾಜನಾಯ್ಕ ತಿಳಿಸಿದ್ದಾರೆ.

# ಅಪರಾಧ ಮಾಡದೇ ಒಪ್ಪಿಕೊಳ್ಳುವವ ಗಂಡ !



**ಜೈನಾಚಾರ್ಯ ಅಭಯಶೇಖರ ಸೂರೀಶ್ವರಜೀ**

ರಾಣೇಬೆನ್ನೂರು, ಜೂ.28- ಪ್ರತಿ ದಿನದ ಪ್ರಸಂಗದಲ್ಲಿ ತನ್ನ ತಪ್ಪು ಇಲ್ಲವೆಂದು ಗೊತ್ತಿದ್ದರೂ ಸಹ ಇದು ಪೂರ್ವ ಜನ್ಮದ ಪಾಪವೆಂದು ತಿಳಿದು ತನ್ನನ್ನು ಅಪರಾಧಿ ಎಂದು ತಿಳಿದುಕೊಂಡು ದಾಂಪತ್ಯ ಜೀವನದಲ್ಲಿ ಶಾಂತಿ ಕಂಡುಕೊಳ್ಳುವವ ಹೆಂಡತಿ ಹಾಗೂ ಜನರ ಹೃದಯದ ಸ್ವಾಮಿ ಆಗುತ್ತಾನೆ.


ರಾಣೇಬೆನ್ನೂರು ವರ್ತಕರ ಸಂಘದಲ್ಲಿ ಬಿಡುಗಡೆಗೊಂಡ ಜೈನ್ ಆಚಾರ್ಯ ವಿಜಯ ಅಭಯಶೇಖರ ಸೂರಿ ಅವರ ಜೈಲರ್ ಪುಸ್ತಕದ ಮೊದಲ ಪುಟದ ಸಾಲುಗಳಿವು.

ಶಿಕ್ಷೆಯನ್ನು ನ್ಯಾಯಾಲಯ ನಿರ್ಧರಿಸುತ್ತದೆ. ಅದನ್ನು ಜಾರಿಗೊಳಿಸುವವ ಜೈಲರ್. ನಿರ್ಧರಿಸುವ ಹಕ್ಕು ಇಲ್ಲದ ಜೈಲರ್, ಅದನ್ನು ಜಾರಿಗೊಳಿಸುವ ಕಾನೂನಾತ್ಮಕ ಹಕ್ಕುಗಳನ್ನು ಹೊಂದಿರುತ್ತಾನೆ. ಇದು ಅವನ ಸಹಜ ಬದುಕು ಎಂದು ವ್ಯಾಖ್ಯಾನಿಸಿ, ಎಲ್ಲಾ ಸಮಾಜದವರು ಈ ಪುಸ್ತಕವನ್ನು ಓದಿದರೆ ಬದುಕಿನಲ್ಲಿ ಶಾಂತಿ ಕಂಡುಕೊಳ್ಳಬಹುದು ಎಂದು ಅಭಯಶೇಖರ ಸುರೀಶ್ವರಜೀ ತಿಳಿಸಿದರು.

ಪೂರ್ವಾಶ್ರಮದಲ್ಲಿದ್ದ ತಮ್ಮ ಎಲ್ಲ ಸಿರಿ ಸಂಪತ್ತನ್ನು ತ್ಯಜಿಸಿ ಅಪ್ರಮಾಣಿಕತೆ, ಸುಳ್ಳು, ಮೋಸ ಮುಂತಾದವುಗಳಿಂದ ದೂರವಿದ್ದು ಕಠಿಣ ಬ್ರಹ್ಮಚರ್ಯದೊಂದಿಗೆ ಚಿಕ್ಕ ಹೆಣ್ಣು ಮಗುವಿನಿಂದ 90 ವರ್ಷದ ವೃದ್ಧೆಯನ್ನು ಸಹ ಮುಟ್ಟದ, ಸೂರ್ಯಾಸ್ತದ ನಂತರ ಅನ್ನ, ನೀರು ಗ್ರಹಿಸದ, ಸಸ್ಯಹಾರಿಗಳ ಮನೆಯಲ್ಲಿ ಅವರಿಗೆ ಕೊರತೆಯಾಗದಂತೆ ಕಡಿಮೆ ಪ್ರಮಾಣದಲ್ಲಿಯೇ ಆಹಾರದ ಭಿಕ್ಷೆ ಪಡೆಯುವುದು, ಬರಿಗಾಲಿನಲ್ಲಿಯೇ ಸಂಚರಿಸುವುದು, ಅರಿಹಂತ ಪ್ರಭುಗಳ ವಚನಗಳ ಪಠಣ, ಬೋಧನೆ ಇದುವೇ ಜೈನ್ ಸನ್ಯಾಸಿಗಳ ಬದುಕು ಎಂದು ಸುರೀಶ್ವರಜೀ ವಿವರಿಸಿದರು.

ಇಂಗ್ಲಿಷ್, ಗುಜರಾತಿ, ತಮಿಳು, ಮರಾಠಿ, ಹಿಂದಿ ಹಾಗೂ ಕನ್ನಡದಲ್ಲಿ ಪ್ರಕಟಗೊಂಡಿರುವ ಈ ಪುಸ್ತಕಗಳು 2 ಲಕ್ಷದ 80 ಸಾವಿರ. ಪುಸ್ತಕವನ್ನು ಎಲ್ಲ ಸಮಾಜದ ಜನರಿಗೆ ತಲುಪಿಸಲಾಗುತ್ತದೆ ಎಂದು ಶ್ರೀಗಳು ಹೇಳಿದರು. ಈ ಕಾರ್ಯಕ್ರಮದಲ್ಲಿ ಜೈನ್ ಶ್ವೇತಾಂಬರ ಸಂಘದ ಅಧ್ಯಕ್ಷ ಪ್ರಕಾಶ ಜೈನ್, ಗೌತಮ ಜೈನ್, ಮಹೀಂದ್ರ ಜೈನ್, ಬಾಬುಲಾಲ್ ಜೈನ್, ಮುನ್ನಾಲಾಲ್ ಜೈನ್, ಸುರೇಶ ಜೈನ್, ಶಾ ಚುನಿಲಾಲ್ ಪ್ರಕಾಶಕುಮಾರ್ ಹಾಗೂ ಇನ್ನಿತರೆ ಸಮಾಜಗಳ ಗಣ್ಯರು ಪಾಲ್ಗೊಂಡಿದ್ದರು.



## ಚಲಸಾನಿ ಮುರುಳಿಕೃಷ್ಣ ನಿಧನ



ಬೆಂಗಳೂರು ವಾಸಿ, ದಾವಣಗೆರೆ ತಾಲ್ಲೂಕು ನಾಗರಸನಹಳ್ಳಿ ಗ್ರಾಮದ **ಚಲಸಾನಿ ಮುರುಳಿಕೃಷ್ಣ** (77) ಅವರು ದಿನಾಂಕ 28.06.2021ರ ಸೋಮವಾರ ಸಂಜೆ 6 ಗಂಟೆಗೆ ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.06.2021ರ ಬುಧವಾರ ಬೆಳಿಗ್ಗೆ 9 ಗಂಟೆಗೆ ಬೆಂಗಳೂರಿನ ಹೆಬ್ಬಾಳದ ಬಳ್ಳಾರಿ ರಸ್ತೆಯಲ್ಲಿರುವ ಚಿರಶಾಂತಿ ಧಾಮದಲ್ಲಿ ನೆರವೇರಲಿದೆ.

- ಇಂತಿ ದುಃಖತಪ್ತ ಕುಟುಂಬ ವರ್ಗ, ಮೊ. 94498 36997

## ಲಿಂಗರಾಜು ತಾಳಿಕೋಟೆ (ನಾಗನೂರು) ನಿಧನ



ದಾವಣಗೆರೆ ಅಶೋಕ ನಗರ ವಾಸಿ ದಿ. ಆದಪ್ಪ ಅವರ ಪುತ್ರ ಲಿಂಗರಾಜು ತಾಳಿಕೋಟೆ (ನಾಗನೂರು) (43) ಅವರು ದಿನಾಂಕ 28.06.2021ರ ಸೋಮವಾರ ರಾತ್ರಿ 11.30ಕ್ಕೆ ನಿಧನರಾದರು. ತಾಯಿ, ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 30.06.2021ರ ಬುಧವಾರ ಬೆಳಿಗ್ಗೆ 10.30 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.


## ಬಿಸಿಯೂಟದ ಧಾನ್ಯ ವಿತರಣೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಜೂ.28 - ತಾಲ್ಲೂಕಿನ ಕೋಡಿಯಾಲದ ಭುವನೇಶ್ವರಿ ಆದರ್ಶ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಿಸಿಯೂಟದ ಆಹಾರ ಧಾನ್ಯ ವಿತರಿಸಲಾಯಿತು. ಮೇಡ್ಲೇರಿ ವಲಯದ ಶಿಕ್ಷಣ ಸಂಯೋಜಕ ಬಿ.ಕೆ ಅಶೋಕ ಅವರು ಆಹಾರ ಧಾನ್ಯವನ್ನು ವಿತರಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನ ಬಾವಿಕಟ್ಟಿ, ಸಹ ಶಿಕ್ಷಕರುಗಳಾದ ಶಿವಯ್ಯ ಹಿರೇಮಠ, ದೇವರಾಜ ಮಲ್ಲಾಪುರ, ರೇಣುಕಮ್ಮ.ಎಸ್, ರೇಖಾ ಸಿ, ಅಡುಗೆ ಕಾರ್ಯ ನಿರ್ವಹಿಸುವ ಯಶೋಧಮ್ಮ ಚಕ್ರಸಾಲಿ, ಗೀತಾ ಗೋಣೆಪ್ಪನವರ, ಅನಸೂಯಮ್ಮ ಹಾಲಮ್ಮನವರ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜಾತಿ ನಿಂದನೆ : ಇಬ್ಬರ ಮೇಲೆ ಕೇಸ್

**ಎಳೆಹೊಳೆ**

ಹರಿಹರ, ಜೂ.28 - ತಾಲ್ಲೂಕಿನ ಎಳೆಹೊಳೆ ಗ್ರಾಮದ ಸರ್ಕಾರಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಗುರುಸ್ವಾಮಿ ಹಾಗೂ ದೃಶ್ಯ ಮಾಧ್ಯಮದ ವರದಿಗಾರನೆಂದು ಹೇಳಿಕೊಂಡ ಪ್ರಕಾಶ್ ಮಂದಾರ ಎಂಬುವರ ವಿರುದ್ಧ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಜಾತಿ ನಿಂದನೆ ಪ್ರಕರಣ ದಾಖಲಾಗಿದೆ.

ಎಳೆಹೊಳೆ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ನೀಡುವ ಪಡಿತರ ಸಾಮಗ್ರಿಗಳನ್ನು ಶೌಚಾ ಲಯದಲ್ಲಿ ಸಂಗ್ರಹಿಸಿ ಇಟ್ಟಿದ್ದಾರೆ ಎಂದು ಅಂಗನವಾಡಿ ಕಾರ್ಯಕರ್ತೆ ವಿನೋದಮ್ಮ ಮೇಲೆ ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಆರೋಪ ಮಾಡಿದ್ದರು. ಪ್ರಕರಣದ ವೀಡಿಯೋವನ್ನು ಪ್ರಕಾಶ್ ಮಂದಾರ ಎಂಬುವರು ಯೂ ಟ್ಯೂಬ್‌ನಲ್ಲಿ ಪ್ರಸಾರ ಮಾಡಿದ್ದರು. ಗುರುಸ್ವಾಮಿ ಅವರು ತಾನು ದಲಿತ ವರ್ಗದ ಮಹಿಳೆ ಎನ್ನುವ ಕಾರಣಕ್ಕೆ ಕೆಲಸಕ್ಕೆ ತೊಂದರೆ ಕೊಡುತ್ತಿದ್ದರು. ಪ್ರಕಾಶ್ ಮಂದಾರ ಎಂಬಾತ ಮಾಮೂಲಿ ಕೊಡು ಎಂದು ಪೀಡಿಸು ತ್ತಿದ್ದರು ಎಂದು ವಿನೋದಮ್ಮ ದೂರಿನಲ್ಲಿ ಆರೋಪಿಸಿದ್ದಾರೆ. ಇವರ ಬೇಡಿಕೆಗೆ ಸ್ಪಂದಿಸಲಿಲ್ಲ ಎನ್ನುವ ಕಾರಣಕ್ಕೆ ಅಂಗನವಾಡಿಯ ಶೌಚಾಲಯದಲ್ಲಿ ಇಲಾಖೆಯ ಖಾಲಿ ಚೀಲ ಬಳಸಿಕೊಂಡು ಪಡಿತರವನ್ನು ಸಂಗ್ರಹಿಸಿಟ್ಟು ಚಿತ್ರೀ ಕರಿಸಿ ಅದನ್ನು ಮೇಲಾಧಿಕಾರಿಗಳಿಗೆ ಹಾಗೂ ಸಾಮಾಜಿಕ ಜಾಲತಾಣ ಹಾಗೂ ಯೂ ಟ್ಯೂಬ್ ಮತ್ತು ದೃಶ್ಯ ಮಾಧ್ಯಮ ಗಳಲ್ಲಿ ತನ್ನನ್ನು ಕಳ್ಳಿ ಎಂದು ಬಿಂಬಿಸಿ ಅವಮಾನಿಸಿದ್ದಾರೆ ಎಂದು ವಿನೋದಮ್ಮ ದೂರಿನಲ್ಲಿ ವಿವರಿಸಿದ್ದಾರೆ.

## ಇಂದು ಕೋವಿಡ್ ಕಾರ್ಯಾಗಾರ

ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಎಂಬಿಎ ಅಧ್ಯಯನ ಮತ್ತು ಸಂಶೋಧನಾ ವಿಭಾಗವು ಇಂದು ಮಧ್ಯಾಹ್ನ 3 ಗಂಟೆಗೆ ಕೋವಿಡ್-19 ರೆಮಿಡೀಸ್ ಕಾರ್ಯಾಗಾರ (ಗೂಗಲ್ ಮೀಟ್) ಏರ್ಪಡಿಸಿದೆ. ಡಾ. ಹೆಚ್. ಎಸ್. ಸಂತೋಷ್ ಮಾತನಾಡುವರು. ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಎಸ್. ಹೊಳಿ ಅಧ್ಯಕ್ಷತೆ ವಹಿಸುವರು. ಎಂಬಿಎ ವಿಭಾಗದ ಸಂಯೋಜನಾಧಿಕಾರಿ ಡಾ. ಟಿ. ಮಂಜುನಾಥ್ ಭಾಗವಹಿಸುವರು. ಕಾರ್ಯಕ್ರಮ ವೀಕ್ಷಣೆಗೆ http: //meet.google.com iew-przo-udo ಲಿಂಕ್ ಬಳಸಿ.


॥ ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಬನಶಂಕರಿ ಬಡಾವಣೆ ವಾಸಿಗಳಾದ

**ಶ್ರೀಮತಿ ಶೋಭಾ ಮತ್ತು ಮಕ್ಕಳು**

ಮಾಡುವ ವಿಜ್ಞಾಪನೆಗಳು.

ದಿನಾಂಕ : 21.06.2021ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಜಿ. ಗಿರೀಶ್ (ಜಲ್ಲಿ)**

ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ


"ಕೈಲಾಸ ಸಮಾರಾಧನೆ"ಯನ್ನು

ದಿನಾಂಕ : 29.06.2021 ನೇ ಮಂಗಳವಾರ ಮಧ್ಯಾಹ್ನ 1.30ಕ್ಕೆ ದಾವಣಗೆರೆ ಸಿಟಿ ಬನಶಂಕರಿ ಬಡಾವಣೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.


ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಶೋಭಾ ಮತ್ತು ಮಕ್ಕಳು
ಸಹೋದರ-ಸಹೋದರಿಯರು ಹಾಗೂ ಬಂಧು-ಮಿತ್ರರು. ಫೋ. : 98453 42626, 97405 12626

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

## ನಮ್ಮ ಪ್ರೀತಿಯ ತಂದೆ - ತಾಯಿಯವರ ಪುಣ್ಯಸ್ಮರಣೆ



18ನೇ ವರ್ಷದ ಪುಣ್ಯಸ್ಮರಣೆ
ಲಿಂ॥ ವೇ॥ ಟಿ.ಎಮ್ ವೀರಯ್ಯನವರು
ದಾವಣಗೆರೆ
ನಿಧನ : 29/06/2003




28ನೇ ವರ್ಷದ ಪುಣ್ಯಸ್ಮರಣೆ
ಲಿಂ॥ ಶ್ರೀಮತಿ ರುದ್ರಮ್ಮನವರು
ದಾವಣಗೆರೆ
ನಿಧನ : 05/07/1993

ನೀವು ನಮ್ಮನ್ನಗಲಿ ವರ್ಷಗಳಾದರೂ ಸಹ ಸದಾ ನಿಮ್ಮ ಜೊತೆಯಲ್ಲಿದ್ದು, ನೀವು ತೋರಿದ ಹಾದಿಯಲ್ಲಿ ನಡೆಯುತ್ತಾ, ನಿಮ್ಮ ಆದರ್ಶಗಳನ್ನು ಪಾಲಿಸುತ್ತಿರುವ ನಮಗೆ ನಿಮ್ಮ ಆಶೀರ್ವಾದ ಸದಾ ಇರಲಿ.

ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ತೊಡರನಾಳು ಮಠದ ವಂಶಸ್ಥರು, ದಾವಣಗೆರೆ.

॥ ಶ್ರೀ ಶಂಭುಲಿಂಗೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ಕರಿಯಪ್ಪರ ವೇದಮೂರ್ತಿ ಮತ್ತು ಮಕ್ಕಳು ಹರಿಹರ ತಾಲ್ಲೂಕು, ಕುಂಬಳೂರು ಇವರು ಮಾಡುವ ವಿಜ್ಞಾಪನೆಗಳು.

ವೇದಮೂರ್ತಿ ಧರ್ಮಪತ್ನಿ

**ಶ್ರೀಮತಿ ದೇವಿಕ ಕೆ.ವಿ**

ಇವರು ದಿನಾಂಕ 31.05.2021ರಂದು ನಿಧನರಾಗಿರುತ್ತಾರೆ. ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

"ಕೈಲಾಸ ಶಿವಗಣಾರಾಧನೆ"ಯನ್ನು

ದಿನಾಂಕ : 29.06.2021 ನೇ ಮಂಗಳವಾರ ಬೆಳಗ್ಗೆ 11ಕ್ಕೆ ಸ್ವಗ್ರಾಮವಾದ ಕುಂಬಳೂರಿನಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ ಕುಟುಂಬ ವರ್ಗ

**ಕರಿಯಪ್ಪರ ವೇದಮೂರ್ತಿ & ಮಕ್ಕಳು**
**ಕುಂಬಳೂರು, ಹರಿಹರ ತಾಲ್ಲೂಕು**
**ಮೊ: 99860 37814, 97419 17136**

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜೂನ್ 29, 2021




ಸೋಮವಾರ ದಾವಣಗೆರೆ ಜಯದೇವ ವೃತ್ತದ ಬಳಿ ಇರುವ ತಿಂಡಿ ಅಂಗಡಿಯೊಂದರ ಬಳಿ ಉಪಹಾರ ಸೇವಿಸುತ್ತಿರುವ ಗ್ರಾಹಕರು.

## ಸಹಜ ಸ್ಥಿತಿಯತ್ತ ದಾವಣಗೆರೆ

ದಾವಣಗೆರೆ, ಜೂ. 28- ಜಿಲ್ಲೆಯಲ್ಲಿ ಲಾಕ್‌ಡೌನ್ ಆರಂಭವಾದಾಗಿನಿಂದ ಇದೇ ಮೊದಲ ಬಾರಿಗೆ ಬೆಳಿಗ್ಗೆ 6 ರಿಂದ ಸಂಜೆ 5 ಗಂಟೆವರೆಗೆ ವಹಿವಾಟು ನಡೆಸಲು ಅನುಮತಿ ನೀಡಲಾಗಿತ್ತು.

ಸೋಮವಾರ ನಗರ ಹಾಗೂ ಮಾರುಕಟ್ಟೆ ಪ್ರದೇಶದಲ್ಲಿ ವಾಹನಗಳ ಓಟಾಟ ಹೆಚ್ಚಾಗಿತ್ತು. ಮಾರುಕಟ್ಟೆಯಲ್ಲಿ ವಸ್ತುಗಳ ಖರೀದಿ ಸಂಜೆ ವರೆಗೂ ನಡೆಯಿತು.

ಗ್ರಾಮೀಣ ಪ್ರದೇಶದ ಜನರೂ ಹೆಚ್ಚಾಗಿ ನಗರಕ್ಕೆ ಧಾವಿಸಿದ್ದರಿಂದ ಮಾರುಕಟ್ಟೆ ಪ್ರದೇಶ ಜನ ಜಂಗುಳಿಯಿಂದ ಕೂಡಿತ್ತು. ಮಾರಾಟ ಹಾಗೂ ಖರೀದಿಗೆ ಅವಧಿ ವಿಸ್ತರಿಸಿದ್ದರಿಂದ ಜನರು ತುಸು ನಿಟ್ಟುಸಿರು ಬಿಟ್ಟಿದ್ದರು.

ಹೋಟೆಲ್‌ಗಳು, ಎಲೆಕ್ಟ್ರಿಕ್, ಎಲೆಕ್ಟ್ರಾನಿಕ್ ಶಾಪ್‌ಗಳು, ಜೆರಾಕ್ಸ್ ಅಂಗಡಿಗಳು, ಫ್ಯಾನ್ಸಿ ಸ್ಟೋರ್‌ಗಳು ಸೇರಿದಂತೆ ಎಲ್ಲಾ ಅಂಗಡಿಗಳೂ ತೆರೆಯಲ್ಪಟ್ಟಿದ್ದವು. ಹೋಟೆಲ್‌ಗಳಲ್ಲಿ ಗ್ರಾಹಕರ ಸಂಖ್ಯೆ ವಿರಳವಾಗಿತ್ತು. ಆದರೆ ಸಂಜೆ ಬೀದಿ ಬದಿಯ ತಿಂಡಿ ಅಂಗಡಿಗಳ ಮುಂದೆ ಜನ ಜಮಾಯಿಸಿದ್ದರು.

# ಮತ್ತೆ 'ಸಾಲ'ದ ಪ್ಯಾಕೇಜ್

### ಸಣ್ಣ ಉದ್ಯಮ, ಆರೋಗ್ಯ ವಲಯಗಳಿಗೆ ಸಾಲ ನೀಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಣೆ

ನವದೆಹಲಿ, ಜೂ. 28 – ಆರ್ಥಿಕತೆಗೆ ಉತ್ತೇಜನ ನೀಡುವ ಸಲುವಾಗಿ ಸಣ್ಣ ಉದ್ಯಮಗಳಿಗೆ 1.5 ಲಕ್ಷ ಕೋಟಿ ರೂ.ಗಳ ಹೆಚ್ಚುವರಿ ಸಾಲ, ಆರೋಗ್ಯ ವಲಯಕ್ಕೆ ಹೆಚ್ಚುವರಿ ಹಣ, ಪ್ರವಾಸಿ ಸಂಸ್ಥೆಗಳಿಗೆ ಸಾಲ ಹಾಗೂ ವಿದೇಶಿ ಪ್ರವಾಸಿಗರಿಗೆ ಉಚಿತ ವೀಸಾ ನೀಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ಬಡವರಿಗೆ ಉಚಿತ ಆಹಾರ ಧಾನ್ಯ ನೀಡಲು ಕೇಂದ್ರ ಸರ್ಕಾರ ಈ ಹಿಂದೆ 93,869 ಕೋಟಿ ರೂ.ಗಳನ್ನು ಪ್ರಕಟಿಸಿತ್ತು. ಇದರ ಜೊತೆಗೆ 14,775 ಕೋಟಿ ರೂ.ಗಳ ರಸಗೊಬ್ಬರ ಸಬ್ಸಿಡಿ, ಬ್ಯಾಂಕುಗಳಿಗೆ ಹಾಗೂ ಸಣ್ಣ ಹಣಕಾಸು ಸಂಸ್ಥೆಗಳಿಗೆ ಸಾಲ ಸೇರಿದಂತೆ, ಕೋವಿಡ್ ವಲಯಗಳಿಗೆ ನೀಡಿದ ನೆರವು 6.29 ಲಕ್ಷ ಕೋಟಿ ರೂ. ಆಗಿದೆ. ಇದರಲ್ಲಿ ಬಹುಭಾಗ ಸಾಲಗಳಿಗೆ ಸರ್ಕಾರ ನೀಡಿದ ಗ್ಯಾರಂಟಿ ಆಗಿದೆ.

ಕೊರೊನಾ ಅಲೆ ಮಕ್ಕಳಿಗೆ ತಗುಲಿದರೆ ನೆರವಾಗುವ ಸಲುವಾಗಿ ಆಸ್ಪತ್ರೆಗಳಲ್ಲಿ ಮಕ್ಕಳಿಗಾಗಿ ಬೆಡ್‌ಗಳನ್ನು ರೂಪಿಸಲು



ಹೆಚ್ಚುವರಿಯಾಗಿ 23,220 ಕೋಟಿ ರೂ. ಗಳನ್ನು ನೀಡುವುದಾಗಿ ಅವರು ಹೇಳಿದ್ದಾರೆ.

ಮಾರ್ಚ್ 2022ರವರೆಗೆ ಹೊಸ ನೇಮಕಾತಿಗಳಿಗೆ ಸರ್ಕಾರವೇ ಭವಿಷ್ಯನಿಧಿ ಒದಗಿಸಲಿದೆ. ಇದಕ್ಕಾಗಿ ಸರ್ಕಾರ 21.42 ಲಕ್ಷ ಫಲಾನುಭವಿಗಳಿಗೆ 902 ಕೋಟಿ ರೂ. ನೀಡಿದೆ.

ಪ್ರವಾಸಿ ಸಂಸ್ಥೆಗಳಿಗೆ 10 ಲಕ್ಷ ರೂ. ಸಾಲ ಹಾಗೂ ಪ್ರವಾಸಿ ಗೈಡ್‌ಗಳಿಗೆ 1 ಲಕ್ಷ ರೂ.ಗಳವರೆಗೆ ಸಾಲ ಪ್ರಕಟಿಸಲಾಗಿದೆ. ಐದು ಲಕ್ಷ ವಿದೇಶಿ ಪ್ರವಾಸಿಗರಿಗೆ ಉಚಿತ ವೀಸಾ ನೀಡಲಾಗುವುದು. ಇದರಿಂದ ಸರ್ಕಾರಕ್ಕೆ 100 ಕೋಟಿ ರೂ.ಗಳ ಹೊರೆಯಾಗಲಿದೆ.

ಎಲ್ಲಾ ಗ್ರಾಮ ಪಂಚಾಯ್ತಿಗಳಿಗೆ ಬ್ರಾಡ್‌ಬ್ಯಾಂಡ್ ಸೌಲಭ್ಯ (5ನೇ ಪುಟಕ್ಕೆ)

### ಸಾಲ ಕೊಟ್ಟರೆ ಪ್ರಯೋಜನವಿಲ್ಲ, ಜನರಿಗೆ ಹಣ ಕೊಡಿ

**ಸೀತಾರಾಮನ್ ಪ್ಯಾಕೇಜ್‌ಗಳಿಗೆ ಕಾಂಗ್ರೆಸ್ ಆಕ್ಷೇಪ**

ನವದೆಹಲಿ, ಜೂ. 28 – ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿರುವ ಆರ್ಥಿಕ ನೆರವುಗಳು ಕೇವಲ ಒಣ ಮಾತುಗಳಾಗಿವೆ. ಸರ್ಕಾರ ಕುಸಿಯುತ್ತಿರುವ ಆರ್ಥಿಕತೆಗೆ ನೆರವಾಗಲು ಸರಕುಗಳ ಬೇಡಿಕೆ ಹೆಚ್ಚಿಸುವ ಕ್ರಮ ತೆಗೆದು ಕೊಳ್ಳಬೇಕು ಎಂದು ಕಾಂಗ್ರೆಸ್ ಹೇಳಿದೆ.

ಸರ್ಕಾರದ ಘೋಷಣೆಗಳ ಬಗ್ಗೆ ಟ್ವೀಟ್ ಮಾಡಿರುವ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಸಾಲ ಯೋಜನೆಗಳಿಂದ ಆರ್ಥಿಕತೆ ಕುಸಿತ ನಿಲ್ಲಿಸುವುದು ಸಾಧ್ಯವಾಗಿಲ್ಲ. ಮತ್ತೆ ಮತ್ತೆ ಅದೇ ಕೆಲಸ ಮಾಡುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂದಿದ್ದಾರೆ.

ಆರ್ಥಿಕತೆಗೆ ಚೇತರಿಕೆ ತರಲು ಹಾಗೂ ಬೇಡಿಕೆ ಹೆಚ್ಚಿಸಲು ಹಣಕಾಸು ಸಚಿವೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದರ ಬದಲು ಅವರು ಹೊಸ (5ನೇ ಪುಟಕ್ಕೆ)

## ಜು.19, 22ರಂದು ಎಸ್ಸೆಸ್ಸೆಲ್ಸಿ ಪರೀಕ್ಷೆ

### ಜುಲೈ ಎರಡನೇ ವಾರದಲ್ಲಿ ಪಿಯು ಪರೀಕ್ಷಾ ಫಲಿತಾಂಶ

ಬೆಂಗಳೂರು, ಜೂ. 28 - ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಜುಲೈ 19 ಹಾಗೂ 22 ರಂದು ನಡೆಸಲು ನಿರ್ಧಾರ ಕೈಗೊಂಡಿರುವ ಸರ್ಕಾರ, ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶವನ್ನು ಜುಲೈ 2ನೇ ವಾರದಲ್ಲಿ ಪ್ರಕಟಿಸಲು ನಿರ್ಧರಿಸಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್‌ಕುಮಾರ್ ತಮ್ಮ ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳ ಜೊತೆಗೂಡಿ, ಜಿಲ್ಲಾಡಳಿತದೊಂದಿಗೆ ವಿಡಿಯೋ ಸಂವಾದ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿಯನ್ನು ಪ್ರಕಟಿಸಿದ್ದಾರೆ.

ಜುಲೈ 19 ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ಪರೀಕ್ಷೆ ನಡೆಯಲಿದೆ. ಜುಲೈ 22 ರಂದು ಭಾಷಾ ವಿಷಯಗಳ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ ಎಂದರು.

#### ಸದ್ಯಕ್ಕೆ ಶಾಲೆ ತೆರೆಯುವುದಿಲ್ಲ

**8ರಿಂದ 10ರವರೆಗೆ 'ಚಂದನ'ದಲ್ಲಿ ಪಾಠ**

ಸದ್ಯಕ್ಕೆ ಶಾಲೆಗಳನ್ನು ತೆರೆಯುವುದಿಲ್ಲ. 8 ರಿಂದ 10ನೇ ತರಗತಿ ವರೆಗೂ ಜುಲೈ 1 ರಿಂದ ಚಂದನ ವಾಹಿನಿ ಮೂಲಕ ಪಾಠ ಪ್ರವಚನ ನೀಡಲು ತೀರ್ಮಾನಿಸಲಾಗಿದೆ ಎಂದು ಶಿಕ್ಷಣ ಸಚಿವ ಸುರೇಶ್ ಕುಮಾರ್ ತಿಳಿಸಿದ್ದಾರೆ.

ಒಂದರಿಂದ 12 ತರಗತಿ ವರೆಗೂ ಶಾಲಾ-ಕಾಲೇಜುಗಳನ್ನು ಆರಂಭಿಸುವ ಬಗ್ಗೆ ಇನ್ನೂ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಶಾಲೆಗಳನ್ನು ಆರಂಭಿಸುವ ಸಂಬಂಧ ತಜ್ಞರು, ವರದಿ ನೀಡಿದ್ದಾರೆ. ಅಲ್ಲದೆ ಡಾ. ದೇವಿಶೆಟ್ಟಿ ಅವರು ನೀಡಿರುವ ವರದಿಯನ್ನಾಧರಿಸಿ, ಮುಂದಿನ ದಿನಗಳಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ಅಲ್ಲಿಯವರೆಗೂ 8 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಚಂದನ ವಾಹಿನಿ ಮೂಲಕ ದಿನನಿತ್ಯ ಪಾಠ, ಪ್ರವಚನಗಳು ನಡೆಯಲಿವೆ ಎಂದರು.

ಪ್ರಸಕ್ತ ವರ್ಷ 8,76,581 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಇವರಿಗಾಗಿ 73066 ಪರೀಕ್ಷಾ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ.

ಪ್ರತಿ ಕೊಠಡಿಯಲ್ಲಿ 18 ವಿದ್ಯಾರ್ಥಿಗಳು ಮಾತ್ರ ಪರೀಕ್ಷೆ ಬರೆಯಲಿದ್ದು, ಒಂದು ಬೆಂಚ್‌ಗೆ ಒಬ್ಬ ವಿದ್ಯಾರ್ಥಿ ಮಾತ್ರ ಕುಳಿತುಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ.

ಸಿಇಟಿ ಮಾದರಿಯ ಪ್ರಶ್ನೆ ಪತ್ರಿಕೆಯಾಗಿದ್ದು, ಪ್ರತಿ ವಿಷಯಕ್ಕೂ 40 ಪ್ರಶ್ನೆಗಳಿರುತ್ತವೆ. (5ನೇ ಪುಟಕ್ಕೆ)

## ಜಿಎಂ ಟ್ರಸ್ಟ್‌ನ ಆಕ್ಸಿಜನ್ ಪ್ಲಾಂಟ್ ಸೇವೆಗೆ ಸಮರ್ಪಣೆ

ಹರಿಹರ, ಜೂ28- ತಾಲ್ಲೂಕಿನ ಅಭಿವೃದ್ಧಿಗೆ ಶಾಸಕ ಎಸ್. ರಾಮಪ್ಪ ಸಚಿವರ ಹಿಂಬಾಲು ಬಿದ್ದು ಕ್ಷೇತ್ರಕ್ಕೆ 100 ಬೆಡ್ ಆಸ್ಪತ್ರೆ ಮತ್ತು ಅಭಿವೃದ್ಧಿಗೆ ಹಣವನ್ನು ತರುವಂತಹ ಕೆಲಸವನ್ನು ಮಾಡಬೇಕು, ಅದನ್ನು ಬಿಟ್ಟು ಕೇವಲ ಭಾಷಣ ಮಾಡಿದರೇ ವಿನಃ ನನ್ನನ್ನು ಎಂದೂ ಕರೆದುಕೊಂಡು ಹೋಗಲಿಲ್ಲ. ಅವರಿಗೆ ಕೆಲಸವನ್ನು ಮಾಡಬೇಕು ಎಂಬ ಆಸೆ ಇದೆ, ಆದರೆ ಆಸೆಗೆ ಸ್ಪಂದನೆ ಸಿಗುತ್ತಿಲ್ಲ. ಆದ್ದರಿಂದ ಜಿಲ್ಲಾ ಉಸ್ತುವಾರಿ ಸಚಿವರು ರಾಮಪ್ಪನವರಿಗೆ ಹೆಚ್ಚು ಸಹಕಾರ ಮಾಡಬೇಕು ಎಂದು ಸಂಸದ ಜಿ.ಎಂ. ಸಿದ್ದೇಶ್ವರ್ ಹೇಳಿದರು.

ನಗರದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಜಿ. ಮಲ್ಲಿಕಾರ್ಜುನಪ್ಪ, ಹಾಲಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ಸುಮಾರು 60 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಆಕ್ಸಿಜನ್ ಪ್ಲಾಂಟ್‌ಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎ. ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್. ರಾಮಪ್ಪ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಯವರು ಚಾಲನೆ ನೀಡಿದ ನಂತರದಲ್ಲಿ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.



**ಹರಿಹರದಲ್ಲಿ 60 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಿರುವ ಆಕ್ಸಿಜನ್ ಪ್ಲಾಂಟ್ ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್**

ದೇಶದಲ್ಲಿ ಕೊರೊನಾ ಎರಡನೇ ಅಲೆ ಬಹಳ ದೊಡ್ಡದಾದ ಸಮಸ್ಯೆಯನ್ನು ತಂದಿತ್ತು. ಇದರಿಂದಾಗಿ ಸಾರ್ವಜನಿಕರಿಗೆ ಆಕ್ಸಿಜನ್ ಕೊರತೆ ಹೆಚ್ಚಾಗಿ ಕಂಡುಬಂದ ಆ ಸಮಯದಲ್ಲಿ, ನಾವು ಹರಿಹರ ನಗರದ ಸದರನ್ ಗ್ಯಾಸ್‌ಗೆ ಭೇಟಿ ನೀಡಿದಾಗ ನಮ್ಮ ಜಿಲ್ಲೆ ಸೇರಿದಂತೆ ಪಕ್ಕದ ಹಲವಾರು ಜಿಲ್ಲೆಯ ಜನರ ಪ್ರಾಣ ರಕ್ಷಣೆಗೆ ಇಲ್ಲಿಂದ ಆಕ್ಸಿಜನ್ ಸರಬರಾಜು ಮಾಡುವುದನ್ನು ಗಮನಿಸಿ, ಇಲ್ಲಿನ ಜನತೆಗೆ ನಾವೇ ಯಾಕೆ ಆಕ್ಸಿಜನ್ ಕೇಂದ್ರವನ್ನು ತೆರೆಯಬಾರದು ಎಂದು ತೀರ್ಮಾನಕ್ಕೆ ಬಂದು ಹರಿಹರ, ಹರಪನಹಳ್ಳಿ, ಚಿತ್ರದುರ್ಗ ನಗರದಲ್ಲಿ ಸುಮಾರು 1 ಕೋಟಿ 80 ಲಕ್ಷ ಹಣವನ್ನು ಖರ್ಚು ಮಾಡಿ ಜಿ.ಎಂ. ಮಲ್ಲಿಕಾರ್ಜುನಪ್ಪ ಹಾಲಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ನಿರ್ಮಾಣ ಮಾಡಿ, ಈ ಭಾಗದ ಜನರಿಗೆ (5ನೇ ಪುಟಕ್ಕೆ)

### ದೇಶದಲ್ಲಿ 40 ಸಾವಿರ ಬ್ಲಾಕ್ ಫಂಗಸ್ ಪ್ರಕರಣ

ನವದೆಹಲಿ, ಜೂ. 28 - ದೇಶದಲ್ಲಿ ಒಟ್ಟು 40,845 ಬ್ಲಾಕ್ ಫಂಗಸ್ ಪ್ರಕರಣಗಳು ಕಂಡು ಬಂದಿವೆ. ಬ್ಲಾಕ್ ಫಂಗಸ್‌ನಿಂದ 3,129 ಸಾವುಗಳು ಸಂಭವಿಸಿವೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ತಿಳಿಸಿದ್ದಾರೆ.

ಕೊರೊನಾ ಸೋಂಕಿತರಲ್ಲಿ ಶೇ.85.5ರಷ್ಟು ಜನರು ಕೊರೊನಾ (5ನೇ ಪುಟಕ್ಕೆ)

### ಕೊರೊನಾ : 2-ಡಿಜಿ ಔಷಧಿ ಬಿಡುಗಡೆ

ನವದೆಹಲಿ, ಜೂ. 28 - ಕೊರೊನಾ ಔಷಧಿಯಾದ 2-ಡಿಜಿ (2-ಡೊಕ್ಸಿ - ಡಿ - ಗ್ಲುಕೋಸ್) ಔಷಧಿಯನ್ನು ವಾಣಿಜ್ಯ ಉದ್ದೇಶಕ್ಕೆ ಬಿಡುಗಡೆ ಮಾಡುವುದಾಗಿ ಡಾ. ರೆಡ್ಡೀಸ್ ಲ್ಯಾಬೊರೇಟರೀಸ್ ಪ್ರಕಟಿಸಿದೆ. ಈ ಔಷಧಿಯ ಬೆಲೆ 990 ರೂ. ಆಗಿದೆ.

ಆರಂಭದಲ್ಲಿ ಮಹಾನಗರಗಳು ಹಾಗೂ ಮೊದಲ ಹಂತದ ನಗರಗಳಿಗೆ (5ನೇ ಪುಟಕ್ಕೆ)

### ಯುಎಇನಲ್ಲಿ ಟಿ20

ನವದೆಹಲಿ ,ಜೂ. 28 – ಈ ವರ್ಷ ಭಾರತದಲ್ಲಿ ನಡೆಯಬೇಕಿದ್ದ ಟಿ20 ವಿಶ್ವಕಪ್ ಪಂದ್ಯಾವಳಿಯನ್ನು ಕೊರೊನಾ ಹಿನ್ನೆಲೆಯಲ್ಲಿ ಯು.ಎ.ಇ.ಗೆ ವರ್ಗಾಯಿಸಲಾಗಿದೆ ಎಂದು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ತಿಳಿಸಿದ್ದಾರೆ. ಇದರೊಂದಿಗೆ ಅಕ್ಟೋಬರ್ - ನವೆಂಬರ್ ತಿಂಗಳಲ್ಲಿ ನಡೆಯಲಿರುವ ಪಂದ್ಯಾವಳಿಯ ಕುರಿತ ಊಹಾಪೋಹಗಳಿಗೆ ತೆರೆ ಬಿದ್ದಂತಾಗಿದೆ.

ಟಿ20 ಪಂದ್ಯಾವಳಿಯನ್ನು ಯುಎಇಗೆ ವರ್ಗಾಯಿಸಿರುವ ಬಗ್ಗೆ ಐ.ಸಿ.ಸಿ.ಗೆ ಅಧಿಕೃತವಾಗಿ ತಿಳಿಸಲಾಗಿದೆ. ಈ ಬಗ್ಗೆ ವಿವರಗಳನ್ನು ನಿರ್ಧರಿಸಲಾಗುತ್ತಿದೆ ಎಂದು ಗಂಗೂಲಿ ತಿಳಿಸಿದ್ದಾರೆ. ಪಂದ್ಯಾವಳಿಯ ಸ್ಥಳ ಬದಲಾದರೂ, ಬಿಸಿಸಿಐ ಆತಿಥೇಯ ದೇಶವಾಗಿರಲಿದೆ.

### ಕೊವಿನ್ ವ್ಯವಸ್ಥೆ ಬಗ್ಗೆ 50ಕ್ಕೂ ಹೆಚ್ಚು ದೇಶಗಳ ಆಸಕ್ತಿ

ನವದೆಹಲಿ, ಜೂ. 28 - ಕೊರೊನಾ ಲಸಿಕೆ ನೋಂದಣಿಗಾಗಿ ರೂಪಿಸಲಾಗಿರುವ ಕೊವಿನ್ ವ್ಯವಸ್ಥೆಯ ಬಗ್ಗೆ 50 ದೇಶಗಳು ಆಸಕ್ತಿ ತೋರಿವೆ. ಭಾರತ ಈ ತಂತ್ರಾಂಶವನ್ನು ಉಚಿತವಾಗಿ ಓಪನ್ ಸೋರ್ಸ್ ಮೂಲಕ ಹಂಚಿಕೊಳ್ಳಲು ಸಿದ್ಧವಿದೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೊವಿನ್‌ನ ಓಪನ್ ಸೋರ್ಸ್ ಆವೃತ್ತಿ ರೂಪಿಸಿ ಅದನ್ನು ಬೇರೆ ದೇಶಗಳಿಗೆ ಉಚಿತವಾಗಿ ನೀಡಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಿರ್ದೇಶನ ನೀಡಿದ್ದಾರೆ ಎಂದು ಕೋವಿಡ್ ಲಸಿಕೆ ಕುರಿತ ಸಶಕ್ತ ಸಮಿತಿಯ ಅಧ್ಯಕ್ಷ ಡಾ. ಆರ್. ಎಸ್. ಶರ್ಮ ತಿಳಿಸಿದ್ದಾರೆ. ಕಳೆದ ಐದು ತಿಂಗಳಲ್ಲಿ ಕೊವಿನ್ 30 ಕೋಟಿಗೂ ಹೆಚ್ಚು ಲಸಿಕಾ ನೋಂದಣಿ ಹೊಂದುವಷ್ಟು ಬೆಳೆದಿದೆ ಎಂದಿರುವ ಶರ್ಮ, 130 ಕೋಟಿ ಜನರಿಗೆ ಲಸಿಕೆ ನೀಡುವುದು ಸಣ್ಣ ಕೆಲಸವಲ್ಲ. ಕೊವಿನ್ ರೂಪಿಸಿರುವುದು ಭಾರತ ಡಿಜಿಟಲ್ ವ್ಯವಸ್ಥೆಯಲ್ಲಿ ಹೊಂದಿರುವ ಸಾಮರ್ಥ್ಯ ತೋರಿಸುತ್ತದೆ ಎಂದಿದ್ದಾರೆ.

### ಶೇ.51.18ರಷ್ಟು ಮಕ್ಕಳಲ್ಲಿ ಕೊರೊನಾ ಆಂಟಿಬಡಿ

**ಮಕ್ಕಳಲ್ಲಿಈಗಾಗಲೇ ವ್ಯಾಪಕ ಕೊರೊನಾ ಸೋಂಕಿರುವುದನ್ನು ತಿಳಿಸಿದ ಮುಂಬೈ ಸೆರೋ ಸಮೀಕ್ಷೆ**

ಮುಂಬೈ, ಜೂ. 28 – ಕೊರೊನಾ ಮೂರನೇ ಅಲೆಯ ಕಳವಳದ ಹಿನ್ನೆಲೆಯಲ್ಲಿ ಮುಂಬೈನಲ್ಲಿ ನಡೆಸಲಾದ 18 ವರ್ಷದೊಳಗಿನ ಮಕ್ಕಳ ಸಮೀಕ್ಷೆಯಲ್ಲಿ, ಶೇ.51.18 ರಷ್ಟು ಮಕ್ಕಳಲ್ಲಿ ಕೊರೊನಾ ಆಂಟಿ ಬಡಿ ಇರುವುದು ಕಂಡು ಬಂದಿದೆ.

ಈ ಬಗ್ಗೆ ವಿವರ ನೀಡಿರುವ ಮುಂಬೈ ಮಹಾನಗರ ಪಾಲಿಕೆ, ಏಪ್ರಿಲ್‌ನಿಂದ ಜೂನ್ ನಡುವೆ 2,176 ಮಕ್ಕಳ ರಕ್ತದ ಮಾದರಿ ಪರೀಕ್ಷಿಸಿ ಈ ವರದಿ ರೂಪಿಸಿರುವುದಾಗಿ ಹೇಳಿದೆ.

ಈ ಹಿಂದಿನ ಸೆರೋ ಸರ್ವೆಗೆ ಹೋಲಿಸಿದರೆ ಈ ಬಾರಿ ಹೆಚ್ಚು ಮಕ್ಕಳಲ್ಲಿ ಆಂಟಿಬಡಿ ಇರುವುದು ಕಂಡು ಬಂದಿದೆ. ಒಟ್ಟಾರೆ ಅರ್ಧದಷ್ಟು ಮಕ್ಕಳು ಈಗಾಗಲೇ ಕೊರೊನಾ ವೈರಸ್ ಎದುರಿಸಿರುವುದು ಕಂಡು ಬಂದಿದೆ ಎಂದು ಸಮೀಕ್ಷೆ ಹೇಳಿದೆ. 10ರಿಂದ 14 ವರ್ಷದ ಮಕ್ಕಳಲ್ಲಿ ಅತಿ ಹೆಚ್ಚಿನ ಶೇ.53.43ರಷ್ಟು ಸೆರೋ ಪಾಸಿಟಿವಿಟಿ ಕಂಡು ಬಂದಿದೆ.

### ಕಾಸರಗೋಡು ಹೆಸರು ಬದಲಾವಣೆ ಬೇಡ, ಕೇರಳಕ್ಕೆ ಮುಖ್ಯಮಂತ್ರಿ ಬಿಎಸ್‌ವೈ ಪತ್ರ

ಬೆಂಗಳೂರು, ಜೂ. 28 – ಕಾಸರಗೋಡು ಜಿಲ್ಲೆಯ ಸ್ಥಳಗಳ ಹೆಸರು ಬದಲಿಸುವುದನ್ನು ನಿಲ್ಲಿಸುವಂತೆ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪತ್ರದ ಮೂಲಕ ಮನವಿ ಮಾಡಿಕೊಡಿದ್ದಾರೆ.

ಆದರೆ, ಕನ್ನಡದಲ್ಲಿರುವ ಹೆಸರುಗಳನ್ನು ಮಲಯಾಳಂಗೆ ಬದಲಿಸುವ ಯಾವುದೇ ಯೋಚನೆ ಇಲ್ಲ ಎಂದು ಕೇರಳ ಸರ್ಕಾರ ತಿಳಿಸಿದೆ.


ವಿಜಯನ್‌ಗೆ ಪತ್ರ ಬರೆದಿರುವ ಯಡಿಯೂರಪ್ಪ, ಕಾಸರಗೋಡು ಹಾಗೂ ಮಂಜೇಶ್ವರಗಳು ತಮ್ಮ ಸಾಂಪ್ರದಾಯಿಕ ಸಂಸ್ಕೃತಿ ಹಾಗೂ ಐತಿಹಾಸಿಕ ಹಿನ್ನೆಲೆಗೆ ಹೆಸರಾಗಿವೆ. ಇವುಗಳು (5ನೇ ಪುಟಕ್ಕೆ)

### ಜು. 30ರಿಂದ ಶಿಕ್ಷಕರ ವರ್ಗಾವಣೆಗೆ ನಿರ್ಧಾರ

ಬೆಂಗಳೂರು, ಜೂ.28 - ಶಿಕ್ಷಕರ ವರ್ಗಾವಣೆಯನ್ನು ಜುಲೈ 30 ರಿಂದ ಕೈಗೆತ್ತಿಕೊಳ್ಳಲು ಸರ್ಕಾರ ತೀರ್ಮಾನಿಸಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್‌ಕುಮಾರ್ ತಿಳಿಸಿದ್ದಾರೆ.

ಹಿರಿಯ ಅಧಿಕಾರಿಗಳ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕ್ಷಕರ ವರ್ಗಾವಣೆ ವೇಳಾಪಟ್ಟಿ. ಶಿಕ್ಷಕ ಸ್ನೇಹಿ ವರ್ಗಾವಣೆ ನೀತಿ ಜಾರಿಗೊಳಿಸಲು ಸುಗ್ರೀವಾಜ್ಞೆ ತರಲಾಗಿದೆ. ಜೂನ್ 30 ರಿಂದ ವರ್ಗಾವಣೆ ಪ್ರಕ್ರಿಯೆ ಆರಂಭವಾಗಲಿದೆ. 75 ಸಾವಿರ ಅರ್ಜಿಗಳು ವರ್ಗಾವಣೆಗೆ ಸ್ವೀಕೃತವಾಗಿದೆ. ಶಿಕ್ಷಕಮಿತ್ರ ಆಪ್ ಮೂಲಕ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಿ ವರ್ಗಾವಣೆ ಆಯ್ಕೆ ಮಾಡಿಕೊಳ್ಳಬಹುದಾಗಿದೆ ಎಂದು ಹೇಳಿದ್ದಾರೆ.

### ಚನ್ನಗಿರಿಯಲ್ಲಿ ಆಕ್ಸಿಜನ್ ಪ್ಲಾಂಟ್ ಲೋಕಾರ್ಪಣೆ




ಚನ್ನಗಿರಿ, ಜೂ. 28- ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಕೆಎಸ್‌ಡಿಎಲ್ ನಿಗಮದ ಸಿಎಸ್‌ಆರ್ ನಿಧಿಯಲ್ಲಿ ಮಂಜೂರು ಮಾಡಲಾದ 80 ಲಕ್ಷ ರೂ. ವೆಚ್ಚದ ನೂತನ ಆಕ್ಸಿಜನ್ ಘಟಕವನ್ನು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್, ಸಂಸದ ಡಾ.ಜಿ. ಎಂ.ಸಿದ್ದೇಶ್ವರ ಹಾಗೂ ಚನ್ನಗಿರಿ ಶಾಸಕರು ಹಾಗೂ ಕೆಎಸ್‌ಡಿಎಲ್ ನಿಗಮದ ಅಧ್ಯಕ್ಷ ಮಾಡಳ್ ವಿರೂಪಾಕ್ಷಪ್ಪ ಲೋಕಾರ್ಪಣೆಗೊಳಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್, ತಾಲ್ಲೂಕಿಗೆ ಅಗತ್ಯವಾಗಿ ಬೇಕಾಗಿರುವ ಆಕ್ಸಿಜನ್ ಘಟಕ ಆರಂಭವಾಗಿದ್ದು, ಇದರ ಸದುಪಯೋಗವಾಗಬೇಕು. ಸೋಂಕಿತರಿಗೆ ಮುಂಬರುವ ದಿನಗಳಲ್ಲಿ ಯಾವುದೇ ರೀತಿಯಲ್ಲಿ ಆಕ್ಸಿಜನ್ ಕೊರತೆ ಉಂಟಾಗಬಾರದು ಎಂದರು. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಮಾತನಾಡಿ, ನೂತನ ಆಕ್ಸಿಜನ್ ಘಟಕವು ಗಂಟೆಗೆ 30 ಸಾವಿರ ಲೀಟರ್ ಆಕ್ಸಿಜನ್ ಹಾಗೂ ನಿಮಿಷಕ್ಕೆ 500 ಲೀಟರ್ ಆಕ್ಸಿಜನ್ ಉತ್ಪಾದನೆ ಮಾಡುತ್ತದೆ ಎಂದರು.

ಕೆಎಸ್‌ಡಿಎಲ್ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್, ಡಿಹೆಚ್‌ಓ ಡಾ.ನಾಗರಾಜ್, ಉಪವಿಭಾಗಾಧಿಕಾರಿ ಮಮತ ಹೊಸಗೌಡರ್ ಇದ್ದರು.

### 81 ಪಾಸಿಟಿವ್ 4 ಸಾವು, 13 ಗುಣ

ದಾವಣಗೆರೆ, ಜೂ.28- ಜಿಲ್ಲೆಯಲ್ಲಿ ಸೋಮವಾರ 81 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 4 ಜನರು



ಮೃತಪಟ್ಟಿದ್ದಾರೆ. 13 ಜನರು ಗುಣಮುಖರಾಗಿ ದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 45, ಹರಿಹರ 5, ಜಗಳೂರು 3, ಚನ್ನಗಿರಿ 8, ಹೊನ್ನಾಳಿ 15 ಹಾಗೂ ಹೊರ ಜಿಲ್ಲೆಯ 5 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 1399 ಸಕ್ರಿಯ ಪ್ರಕರಣ ಗಳಿದ್ದು, ಇಲ್ಲಿಯವರೆಗೆ 537 ಜನರು ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

### ಎಥೆನಾಲ್ ಆಧರಿತ ಫ್ಲೆಕ್ಸ್ ಇಂಜಿನ್‌ಗಳಿಗೆ ಅನುಮತಿ

ಮುಂಬೈ, ಜೂ. 28 - ಎಥೆನಾಲ್ ಆಧರಿತ ಫ್ಲೆಕ್ಸ್ ಇಂಜಿನ್‌ಗಳಿಗೆ ಅನುಮತಿ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮುಂದಿನ ಮೂರು ತಿಂಗಳಲ್ಲಿ ಈ ಯೋಜನೆ ಜಾರಿಗೆ ಬರಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಬ್ರೆಜಿಲ್, ಅಮೆರಿಕ ಹಾಗೂ ಕೆನಡಾ ಸೇರಿದಂತೆ ಹಲವು ದೇಶಗಳು ಫ್ಲೆಕ್ಸ್ ಇಂಜಿನ್‌ಗಳಿಗೆ ಅನುಮತಿ ನೀಡಿವೆ. ಇವುಗಳು ಕೃಷಿ ಉತ್ಪನ್ನಗಳಿಂದ ಚಲಿಸುತ್ತವೆ. ಬಿ.ಎಂ.ಡಬ್ಲ್ಯೂ., ಮರ್ಸಿಡಿಸ್ ಹಾಗೂ ಟೊಯೊಟಾ ಸೇರಿದಂತೆ ಹಲವು ಕಂಪನಿಗಳು ಪರ್ಯಾಯ ಇಂಧನದ ವಾಹನಗಳನ್ನು ಉತ್ಪಾದಿಸುತ್ತಿವೆ ಎಂದವರು ಹೇಳಿದ್ದಾರೆ.

ಸ್ಥಳೀಯವಾಗಿ ಉತ್ಪಾದಿಸಲಾದ ಎಥೆನಾಲ್ ಬಳಸುವುದರಿಂದ ಕಚ್ಚಾ ತೈಲ ಆಮದಿನ ಮೇಲೆ ಅವಲಂಬನೆ ಕಡಿಮೆಯಾಗುತ್ತದೆ. ಇದರಿಂದ ಮಾಲಿನ್ಯ ಕಡಿಮೆಯಾಗುತ್ತದೆ ಹಾಗೂ ಖರ್ಚು ಕಡಿಮೆಯಾಗುತ್ತದೆ ಎಂದ ವರು ಹೇಳಿದ್ದಾರೆ. ಪ್ರಸಕ್ತ ಎಥೆನಾಲ್ ಬೆಲೆ ಲೀಟರ್‌ಗೆ 60 ರಿಂದ 62 ರೂ. ಇದೆ. ಪೆಟ್ರೋಲ್ ಬೆಲೆ ಲೀಟರ್‌ಗೆ 100 ರೂ.ಗಳಷ್ಟಿದೆ ಎಂದು ಗಡ್ಕರಿ ತಿಳಿಸಿದ್ದಾರೆ.

# 5ನೇ ತರಗತಿವರೆಗೆ ಬೋಧಿಸುತ್ತೇವೆ: ಪ್ರಾಥಮಿಕ ಶಾಲಾ ಶಿಕ್ಷಕರ ಮನವಿ




ಹೊನ್ನಾಳಿ, ಜೂ.28- ಸೇವಾ ನಿರತ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು ಸೋಮವಾರ ಕರ್ನಾಟಕ ಆಡಳಿತಾತ್ಮಕ ನ್ಯಾಯಾಧೀಕರಣ ಕೆಎಟಿಗೆ ಒಂದರಿಂದ ಐದನೇ ತರಗತಿಗೆ ಮಾತ್ರ ಬೋಧಿಸಲಾಗುವುದು ಎಂದು ಸೂಚಿಸಿರುವ ಹಿನ್ನೆಲೆಯಲ್ಲಿ ಆರರಿಂದ ಎಂಟನೇ ತರಗತಿವರೆಗೆ ಪಾಠ ಬೋಧನೆ ಮಾಡುವುದಿಲ್ಲ ಎಂದು ಸಂಘದ ಅಧ್ಯಕ್ಷ ಹೊನ್ನೇಶ್ ತಿಳಿಸಿದ್ದಾರೆ.

ಈ ವಿಷಯವಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ರಾಜೀವ್ ಅವರಿಗೆ ಮನವಿ ನೀಡಿ ಮಾತನಾಡಿದರು. ಸಂಘದ ಶಿಕ್ಷಕರುಗಳು ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕುಗಳಲ್ಲಿ ಈವರೆಗೂ ಒಂದರಿಂದ ಎಂಟನೇ ತರಗತಿವರೆಗೆ ಬೋಧಿಸಿಕೊಂಡು ಬರುತ್ತಿದ್ದರು. ಇದೀಗ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ (ಕೆಎಟಿ) ನಮ್ಮನ್ನು ಪ್ರಾಥಮಿಕ ಶಾಲಾ ಶಿಕ್ಷಕರು (ಪಿಎಸ್‌ಟಿ) ಎಂದು ತಿಳಿಸಿದ ಕಾರಣ ಸಂಘ ಈ ರೀತಿ ನಿರ್ಧಾರಕ್ಕೆ ಬಂದಿರುವುದಾಗಿ ಹೇಳಿದರು.

ಈ ನಿರ್ಧಾರವನ್ನು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಸರ್ಕಾರಿ ನೌಕರರ ಸಂಘದ ಗಮನಕ್ಕೆ ತರಲಾಗಿದೆ ಎಂಬುದಾಗಿ ವಿವರಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಇದೀಗ ಮನವಿ ಸಲ್ಲಿಸಲಾಗಿದೆ ಎಂದರು.

ಮತ್ತೊಂದೆಡೆ ಪದವೀಧರ ಶಿಕ್ಷಕರುಗಳಿಗೆ ಮಾತ್ರ ಕೆಎಟಿ ಯಿಂದ ತಮಗಾದ ಅನ್ಯಾಯದ ವಿರುದ್ಧ ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಾಧೀಕರಣಕ್ಕೆ ಮನವಿ ಸಲ್ಲಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಬೇಕೆಂದು ಇಲಾಖೆಗೆ ಒತ್ತಾಯಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎನ್. ಮಹೇಶ್ವರಪ್ಪ, ಖಜಾಂಚಿ ತೋಟಪ್ಪ, ಉಪಾಧ್ಯಕ್ಷ ಮಲ್ಲಿಕಾರ್ಜುನ್, ಸದಸ್ಯ ಮಂಜುನಾಥ್, ಹಾಲಸ್ವಾಮಿ, ಪ್ರಭು, ಪ್ರಶಾಂತ್, ಸಾವಿತ್ರಿ ಬಾಪುಲೆ, ಮಹಿಳಾ ಶಿಕ್ಷಕರ ಸಂಘದ ಅಧ್ಯಕ್ಷೆ ಶಹಜಾನ್, ಕಾರ್ಯದರ್ಶಿ ರಂಜಿತಾ, ಉಪಾಧ್ಯಕ್ಷೆ ರೂಪಾ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಎಸ್. ರುದ್ರೇಶ್, ಖಜಾಂಚಿ ಚಂದ್ರಶೇಖರ್, ಗೌ. ಅಧ್ಯಕ್ಷ ದೊಂಕತ್ತಿ ನಾಗರಾಜ್, ಕೋಟ್ಯಪ್ಪ ಇದ್ದರು.

# ಕೊರೊನಾದಿಂದ ಮೃತಪಟ್ಟವರ ಕುಟುಂಬಸ್ಥರಿಗೆ ಶೀಘ್ರ ನೆರವು

## ಕೆ.ಎನ್.ಹಳ್ಳಿಯಲ್ಲಿ ಸಚಿವ ಭೈರತಿ ಬಸವರಾಜ್, ಸಂಸದ ಸಿದ್ದೇಶ್ವರ ಭರವಸೆ



ಮಲೇಬೆನ್ನೂರು, ಜೂ.28- ಕಡಾರನಾಯ್ಕನಹಳ್ಳಿ ಗ್ರಾಮಕ್ಕೆ ಇಂದು ಸಂಜೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ.ಸಿದ್ದೇಶ್ವರ ಅವರು ಕೊರೊನಾ ಸೋಂಕಿನಿಂದ ಮೃತಪಟ್ಟಿರುವ ಹಂಚಿನಮನೆ ರೇವಣಪ್ಪ ಅವರ ಮನೆಗೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಕೊರೊನಾ ಸೋಂಕಿನಿಂದ ಮೃತಪಟ್ಟಿರುವ ವ್ಯಕ್ತಿಗಳ ಕುಟುಂಬದವರಿಗೆ ಸರ್ಕಾರದಿಂದ 1 ಲಕ್ಷ ರೂ. ನೀಡುವುದಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಭರವಸೆ ನೀಡಿದ್ದು, ಶೀಘ್ರವೇ ನಿಮ್ಮ ಕೈ ಸೇರಲಿದೆ ಎಂದು ಸಚಿವರು, ಸಂಸದರು ಭರವಸೆ ನೀಡಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್, ಜಿ.ಪಂ. ಸಿಇಒ ವಿಜಯ ಮಹಾಂತೇಶ್ ದಾನಮ್ಮನವರ್, ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ತಾ.ಪಂ. ಇಒ ಗಂಗಾಧರಪ್ಪ, ಉಪತಹಶೀಲ್ದಾರ್ ಆರ್.ರವಿ, ಸಿಪಿಐ ಸತೀಶ್, ಪಿಎಸ್‌ಐ ವೀರಬಸಪ್ಪ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಆನಂದತೀರ್ಥ, ಪ್ರಭಾರ ಪಿಡಿಒ ಮಂಜಾನಾಯ್ಕ, ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಭುಗೌಡ, ಬಿಜೆಪಿ ಮುಖಂಡರಾದ ಕೆ.ಹೆಚ್.ನಾಗನಗೌಡ, ಹುಗ್ಗಿ ಮಹಾಂತೇಶ್ ಮತ್ತಿತರರು ಈ ವೇಳೆ ಹಾಜರಿದ್ದರು.

ಇದಕ್ಕೂ ಮುನ್ನ ಸಚಿವರು, ಸಂಸದರು, ಅಧಿಕಾರಿಗಳು, ಹನಗವಾಡಿ, ಬೆಳ್ಳೂಡಿ, ಭಾನುವಳ್ಳಿ ಗ್ರಾಮಗಳಿಗೂ ಭೇಟಿ ನೀಡಿ, ಕೊರೊನಾ ಸೋಂಕಿನಿಂದ ಮೃತಪಟ್ಟಿರುವ ವ್ಯಕ್ತಿಗಳ ಕುಟುಂಬದವರನ್ನು ಭೇಟಿ ಮಾಡಿ, ಸಾಂತ್ವನ ಹೇಳಿದರು.

# ಹರಿಹರ ತಾ.ನಲ್ಲಿ 657 ಟೆಸ್ಟ್ : 5 ದೃಢ

ಮಲೇಬೆನ್ನೂರು, ಜೂ. 28- ಸೋಮವಾರ ಹರಿಹರ ತಾಲ್ಲೂಕಿನಲ್ಲಿ 657 ಕೋವಿಡ್ ಟೆಸ್ಟ್‌ಗಳಾಗಿದ್ದು, ಈ ಪೈಕಿ 358 ಆರ್‌ಟಿಪಿಸಿಆರ್ ಮತ್ತು 299 ರ್‍ಯಾಪಿಡ್‌ಗಳಲ್ಲಿ 5 ಜನರಿಗೆ ಸೋಂಕು ದೃಢಪಟ್ಟಿದೆ. ಲಸಿಕೆ ಪೂರೈಕೆ ಇಲ್ಲದ ಕಾರಣ ಸೋಮವಾರ ಮಲೇಬೆನ್ನೂರು ಸೇರಿದಂತೆ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಹಾಕಿಲ್ಲ.

# ಕೂಡ್ಲಿಗಿ : ಮಾದಕ ವಸ್ತುಗಳು ಸಮಾಜಕ್ಕೆ ಮಾರಕ



ಪಿಎಸ್‌ಐ ತಿಮ್ಮಣ್ಣ ಚಾಮನೂರು

ಕೂಡ್ಲಿಗಿ, ಜೂ.28- ಕಾನಾಹೊಸಹಳ್ಳಿ ಪೊಲೀಸ್ ಠಾಣೆ ವತಿಯಿಂದ ಹೊಸಹಳ್ಳಿ ಗ್ರಾಮದಲ್ಲಿ ಅಂತರರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಪಿಎಸ್‌ಐ ತಿಮ್ಮಣ್ಣ ಚಾಮನೂರ್, ಯುವ ಪೀಳಿಗೆ ತಂಬಾಕು, ಗುಟ್ಕಾ, ಸ್ಟಾರ್, ವಿಮಲ್‌ನಂತಹ ದುಶ್ಚಟಗಳಿಗೆ ಒಳಗಾಗಿ ಹಾಳಾಗುತ್ತಿದ್ದಾರೆ. ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮದ ಕುರಿತು ಜಾಗೃತಿ ಮೂಡಿಸಬೇಕಾಗಿದೆ ಎಂದು ಹೇಳಿದರು.

ಹೊಸಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐಗಳಾದ ತಿಮ್ಮಣ್ಣ ಚಾಮನೂರು, ಪಿಎಸ್‌ಐ ನಾಗರತ್ನಮ್ಮ, ಎಎಸ್‌ಐ ಕೆ. ಗೋವಿಂದಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ದಿ. ಮಾತೃಶ್ರೀ ಎಸ್.ಟಿ.ಪಿ. ಲಕ್ಷ್ಮಿನರಸಮ್ಮ ಇವರ ಜ್ಞಾಪಕಾರ್ಥವಾಗಿ ದಾವಣಗೆರೆ ಭಕ್ತ ವೃಂದದಿಂದ ಆಚಾರ್ಯ ಪ್ರಸಾದ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟು ಮಾರಾಟಕ್ಕಿದೆ**
ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತದಲ್ಲಿ ಮುಖ್ಯ ರಸ್ತೆಗೆ 55x40 ಅಳತೆಯ ದಕ್ಷಿಣ ಮತ್ತು ಪಶ್ಚಿಮ ರಸ್ತೆ ಇರುವ ಸಂಜೀವಿನಿ ಆಂಜನೇಯ ದೇವಸ್ಥಾನದ ರಸ್ತೆ, 7ನೇ ಕ್ರಾಸ್, ಕಾರ್ನರ್ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
94483 73997, 97318 25700

**WANTED**
SALES MAN
SALES GIRLS
CASHIER
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

ಪ್ರೀತಿಯೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ, ಅನ್ನ ದಾಸೋಹದ ದಾನಿಗಳು
ವಿನಯ್ ಹಿರೇಮಠ್
ವಿದ್ಯಾನಗರ, ದಾವಣಗೆರೆ.
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**Urgent Requirement**
Manappuram Home Finance Ltd
Davanagere Branch
Sales officer - 10post (fresher/experience)
Credit officer 01 (0-6months experience)
Graduation mandatory, Age below 25years
81977 40054
Ashoka Road, Davanagere

**ಮನೆಗಳು ಬಾಡಿಗೆಗೆ ಇವೆ**
ಸಿದ್ದವೀರಪ್ಪ ಬಡಾವಣೆ, 12ನೇ 'ಎ' ಕ್ರಾಸ್‌ನಲ್ಲಿ ಆಂಜನೇಯ ಕೃಪ, #1680/10, ಗ್ರೌಂಡ್ ಫ್ಲೋರ್, 2 ಬೆಡ್ ರೂಂವುಳ್ಳ ಮನೆಗಳು ಬೋರ್ ವೇಲ್/ ಕಾರ್ಪೊರೇಷನ್ ನೀರಿನ ಸೌಕರ್ಯವುಳ್ಳ ಪಶ್ಚಿಮ ದಿಕ್ಕಿನ ಮನೆಗಳು ಬಾಡಿಗೆಗೆ ಇವೆ.
94806 67365, 9448 930346

**ಮಾರಾಟಕ್ಕಿದೆ**
Tractor ಮಾರಾಟಕ್ಕೆ ಇದೆ
Messey Fergusin MF241 (42HP) 2019 Model, 2 Engine, 1Trailor
97319 99977
88842 28109

**2BHK ಮನೆಗಳು ಬಾಡಿಗೆಗೆ ಇವೆ**
ಕುಂದವಾಡ ಕೆರೆ ಹತ್ತಿರ ಮಹಾಲಕ್ಷ್ಮಿ ಲೇಔಟ್ ಕಾವೇರಿ ಅಪಾರ್ಟ್‌ಮೆಂಟ್ ಹಿಂಭಾಗದಲ್ಲಿ ಎಲ್ಲಾ ಆಧುನಿಕ ಸೌಕರ್ಯಗಳಿರುವ ಎರಡು ಬೆಡ್‌ರೂಂ ಹಾಗೂ ಅಟ್ಯಾಚ್ ಬಾತ್‌ರೂಂವುಳ್ಳ 14 ಹೊಸ ಮನೆಗಳು ರಿಯಾಯಿತಿ ದರದಲ್ಲಿ ಬಾಡಿಗೆಗೆ ಇವೆ.
73380 43912
63663 27368

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ರಿ.ಸ.ನಂ 7/16 ರಲ್ಲಿ 17 ಗುಂಟೆ ಜಮೀನು ಮಾರಾಟಕ್ಕಿದೆ. ಮೇನ್ ರೋಡ್ ಪಕ್ಕ ಶ್ಯಾಮನೂರಿನಿಂದ 3 ಕಿಲೋ ಮೀಟರ್, ಮಿಟ್ಲಕಟ್ಟೆ
98443 60459, 87220 14318
95352 69849

**TIPPER FOR SALE**
Vehicle: BHARAT BENZ,
MODEL: 1217C, MAKE: 2017
Vehicle Available at Davanagere City,
Intrested can Contact
Mob: 91085 29389
99807 05864

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಹೊಂಬಾಳ್ ಇ-ಮಾರ್ಟ್**
ಬಾಕಿ ಉಳಿದಿರುವ ಒಂದು ಮಾರ್ಟನ್ನು ತೆರೆಯಲು ಕೇವಲ ಒಬ್ಬರು ಹೂಡಿಕೆದಾರರು ಬೇಕಾಗಿದ್ದಾರೆ. ಕನಿಷ್ಠ 3% ನಿರ್ದಿಷ್ಟ ಆದಾಯದ ಜೊತೆಗೆ 50% ಲಾಭವನ್ನು ಕೊಡಲಾಗುವುದು. ಆಸಕ್ತರು ಕರೆ ಮಾಡಿ ಚರ್ಚಿಸಿ
9008985112

**ಮನೆ ಲೀಸ್‌ಗಿದೆ**
ಎಂ.ಬಿ.ಎ ಕಾಲೇಜ್ ರಸ್ತೆಯಲ್ಲಿ 2 BHK ಮನೆ ಲೀಸ್‌ಗಿದೆ
ಬೋರ್‌ವೆಲ್ ಹಾಗೂ ಮುನ್ಸಿಪಲ್ ನೀರಿನ ಸೌಕರ್ಯವಿದೆ. ಸಂಪರ್ಕಿಸಿ
ಸ್ವಾಮಿ: 99807 28533

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
ಎಂ.ಸಿ.ಸಿ. 'ಬಿ' ಬ್ಲಾಕ್,
ಕುವೆಂಪು ನಗರ
ಫೋನ್ ನಂ:
74118 62216


**ಪುರಸಭಾ ಕಾರ್ಯಾಲಯ, ಹರಪನಹಳ್ಳಿ-583131.**
ಬಳ್ಳಾರಿ ಜಿಲ್ಲೆ
ಫೋನ್ : 08398-280258
ಫ್ಯಾಕ್ಸ್ : 08398-280581
E-mail : itstaff_ulb_harapanahalli@yahoo.com
Website : harapanahallitown.mrc.gov.in

ಕ್ರ.ಸಂ:ಪುಸ:ಹ.ಹಳ್ಳಿ/ಓ.ಡಿ.ಎಫ್+/ಸಿಆರ್/01/2021-22 ದಿನಾಂಕ : 24.06.2021

**"ಸಾರ್ವಜನಿಕ ಪ್ರಕಟಣೆ"**

ಸ್ವಚ್ಛ ಭಾರತ ಮಿಷನ್ ಯೋಜನೆ ಅಡಿಯಲ್ಲಿ ಧ್ಯೇಯೋದ್ದೇಶಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಆದೇಶಿಸಿರುವಂತೆ ಹರಪನಹಳ್ಳಿ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಾರ್ಡ್‌ಗಳನ್ನು ಓಡಿಎಫ್ (ಬಯಲು ಮುಕ್ತ ಪ್ರದೇಶ) ಪಟ್ಟಣವೆಂದು ಘೋಷಿಸಲಾಗಿದ್ದು ಹಾಗೂ ಬಿನ್ ಫ್ರೀ ವಾರ್ಡ್‌ಗಳನ್ನು ಅಂತೆಯೇ ಮುಂದುವರೆದು ಈಗ ಓಡಿಎಫ್+ ಎಂದು ಘೋಷಿಸುವ ಸಲುವಾಗಿ ಈ ಕೆಳಗಿನಂತೆ ಪ್ರಕಟಣೆ ಹೊರಡಿಸಲಾಗಿದೆ. ಬಯಲು ಮುಕ್ತ ಶೌಚಾಲಯ (ಬಯಲು ಮಲ-ಮೂತ್ರ ವಿಸರ್ಜನೆ) ಮಾಡುವುದನ್ನು ನಿಷೇಧಿಸಲಾಗಿದೆ. ನಾಗರಿಕರು ಬಯಲು ಶೌಚಾಲಯ ಮಾಡುವುದು ಕಂಡುಬಂದಲ್ಲಿ ಪುರಸಭೆಯ ಬೈಲಾ ಪ್ರಕಾರ ನಿಗದಿಪಡಿಸಿರುವ ಈ ಕೆಳಕಂಡಂತೆ ದಂಡ ವಿಧಿಸಲಾಗುವುದು.

| ಬಯಲು ಮಲ-ಮೂತ್ರ ಮಾಡಿದಲ್ಲಿ | ದಂಡ ರೂ.ಗಳಲ್ಲಿ | |
|---|---|---|
| | ಮೊದಲ ಬಾರಿ | ಎರಡನೇ ಬಾರಿ |
| ಬಯಲು ಮಲ ವಿಸರ್ಜನೆ | 50/- ರೂ. | 100/- ರೂ. |
| ಬಯಲು ಮೂತ್ರ ವಿಸರ್ಜನೆ | 50/- ರೂ. | 100/- ರೂ. |

ಕಾರಣ, ಹರಪನಹಳ್ಳಿ ಪಟ್ಟಣವನ್ನು ಓಡಿಎಫ್+ ಘೋಷಿಸಲು ಸಾರ್ವಜನಿಕರು ಸಹಕರಿಸಬೇಕಾಗಿ ವಿನಂತಿ.

ಸಹಿ/-
(ಮಂಜುನಾಥ ಇಜಂತಕರ್)
ಅಧ್ಯಕ್ಷರು, ಪುರಸಭೆ, ಹರಪನಹಳ್ಳಿ.

ಸಹಿ/-
(ನಾಗರಾಜನಾಯ್ಕ ಬಿ.ಆರ್.)
ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ.


**ಪ್ರವೇಶ ಪ್ರಕಟಣೆ 2020-21**
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**WANTED LADY**
Tele Caller-cum-Computer Operator
Contact
94484 57151

**ಮನೆ ಬಾಡಿಗೆಗೆ ಇದೆ**
ಮಹಾಲಸ ನಿಲಯ 4ನೇ ಮೇನ್, 4ನೇ ಕ್ರಾಸ್, ವಿನೋಬನಗರ
Contact: 94488 73541
ಸುಬ್ಬರಾವ್ ವೆರ್ಣೇಕರ್
72598 76703

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**WANTED**
Sharp Call For Interview
Field Service Engg requerment for Photocopier Machines, ITI /Diploma, Elc, two wheeler Vechicle Compualsary
Gaurav Communications DVG
Cont: 9379906688 (10 am-7 pm)

**ಹೋಟೆಲ್ ಮಯೂರ ಮತ್ತು ಮಳಿಗೆ ಬಾಡಿಗೆಗೆ ಇರುತ್ತದೆ**
ವಿದ್ಯಾನಗರ ಕೊನೆಯ ಬಸ್‌ಸ್ಟಾಪ್, ಮೇನ್ ರೋಡಿಗೆ ಸುಸಜ್ಜಿತವಾದ ಮಯೂರ ಹೋಟೆಲ್ ಮತ್ತು ಮಳಿಗೆ ಬಾಡಿಗೆಗೆ ಇರುತ್ತದೆ. ಕೂಡಲೇ ಸಂಪರ್ಕಿಸಿ
94495 66566
78923 08653

**ಶಿಕ್ಷಕಿಯರು ಬೇಕಾಗಿದ್ದಾರೆ**
NTC, BA, BEd, BSc, BEd ಆದ ಶಿಕ್ಷಕಿಯರು ಬೇಕಾಗಿದ್ದಾರೆ.
93411 19195
99800 32237

**ಮನೆ ಲೀಸ್‌ಗೆ ಇದೆ**
ದಾವಣಗೆರೆ ಯಲ್ಲಮ್ಮನಗರ 3ನೇ ಮೇನ್, 8ನೇ ಕ್ರಾಸ್, ಹರ್ಷ ಬಿಲ್ಡಿಂಗ್ ಗ್ರೌಂಡ್ ಫ್ಲೋರ್‌ನಲ್ಲಿ 2 ಬೆಡ್ ರೂಂ ಇರುವ ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ
ಮೊ: 94806 51444

**MNC Jobs**
SOFTWARE DEVELOPER
For BE/BCA/MCA/M.Tech in Computer Science. Freshers & Experinced
Location : Davanagere Dist
9844492888

**ಮಣಿಪಾಲ್ ಆರೋಗ್ಯ ಕಾರ್ಡ್**
ಏಪ್ರಿಲ್, ಮೇ, ಜೂನ್ 2019 ಮತ್ತು 2020ರಲ್ಲಿ ಮಾಡಿಕೊಂಡಿರುವ ರಿನೀವಲ್ ಮಾಡಿಕೊಳ್ಳಲು 30.06.2021 ಕೊನೆಯ ದಿನಾಂಕ.
ಸಂಪರ್ಕಿಸಿ
ಮಣಿಪಾಲ್ ಮಾಹಿತಿ ಕೇಂದ್ರ
ಕೆ.ಕೆ. ಅಸೋಸಿಯೇಟ್ಸ್, ತ್ರಿಶೂಲ್ ಟಾಕೀಸ್ ರಸ್ತೆ, ದಾವಣಗೆರೆ.
ಮೊ: 97317 09177, 89042 19373

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ನೇರ ಪರೀಕ್ಷೆಗಳು**
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಮನೆ ಬಾಡಿಗೆಗೆ ಇದೆ ವಿಚಾರಿಸಿ**
2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. 11ನೇ ಮೇನ್, 5ನೇ ಕ್ರಾಸ್ ಎಂ.ಸಿ.ಸಿ. ಬಿ ಬ್ಲಾಕ್ ಭವಾನಿ ಹಿಟ್ಟಿನ ಗಿರಿಣಿ ಹತ್ತಿರ ದಾವಣಗೆರೆ-577004
ಫೋ: 83100 76813
90363 76232

**ಕಾವೇರಿ ಉಪಹಾರ ದರ್ಶಿನಿ**
ಗಾಂಧಿ ಸರ್ಕಲ್
28-06-2021ರಿಂದ ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ತೆರೆದಿರುತ್ತದೆ. ಸಂಜೆ 5ರಿಂದ ಪಾರ್ಸಲ್ ವ್ಯವಸ್ಥೆ ಇರುತ್ತದೆ.
ಮೊ : 99646 36217









**Urgent Requirement**
Stubcart Groups Davangere.
Telecallers for Female
* Qulification : SSLC, PUC or any Degree.
* Salary 6000 to 7000 + Sales Incentives
* Teritory Sales Mangere Position
* Any Degree for male candidate
* Salary 10000 to 13000 + Sales incentives hi
* Tata Ace Driver cum Delivery
* Salary 10000 to 16000, DL Compulsory
86181 89440

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ, ಸಂಪರ್ಕಿಸಬೇಕಾದ ವಿಳಾಸ
ಕಿರಣ್ ಎಂಟರ್ ಪ್ರೈಸಸ್
4ನೇ ಮೇನ್, 1ನೇ ಕ್ರಾಸ್, ವಿನೋಬನಗರ, ದಾವಣಗೆರೆ.
ದೂರವಾಣಿ ಸಂಖ್ಯೆ: 87629 02569

**ಶ್ರೀ ಕಂಬಾಳಮ್ಮ ದೇವಿ ಜ್ಯೋತಿಷ್ಯಾಲಯ**
ಪಂ. ಗಣೇಶ್ ಕುಡ್ಲ
ನೀವು ಇಷ್ಟಪಟ್ಟವರು ನಿಮ್ಮಂತಾಗಲು, ನಿಮ್ಮ ಸಮಸ್ಯೆಗಳೇನು?, ನಿಮ್ಮ ಸಂಕಷ್ಟಗಳೇನು ಕೇಳಿ ತಿಳಿಯಿರಿ, ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ಹಾಗೂ ದಾಂಪತ್ಯ ಸಮಸ್ಯೆ, ನಿಮ್ಮ ಯಾವುದೇ ಸಮಸ್ಯೆ ಇದ್ದರು ಕೇವಲ 24 ಗಂಟೆಯಲ್ಲಿ ಶಾಶ್ವತ ಪರಿಹಾರ ಕೊಡುತ್ತಾರೆ.
ಮೊ: 99807 70791


ಮಾಸ್ಕ್ ಬಳಸಿ
ಕೊರೊನಾ ತೊಲಗಿಸಿ

**ಸಾರ್ವಜನಿಕ ಪ್ರಕಟಣೆ**


ನನ್ನ ಕಕ್ಷಿದಾರರಾದ ಶ್ರೀ ಅರುಣ್‌ಕುಮಾರ್ ಜೆ.ಜಿ. ಬಿನ್ ಶ್ರೀ ಜಿ . ಜಯದೇವ, ವಾಸ : ಡೋರ್ ನಂಬರ್ 23/ಎ, ಪಾಪರೆಡ್ಡಿ ಪಾಳ್ಯ, ಅಲ್ವಿನ್ ಬೇಕರಿ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು ಇವರು ಇದೇ ಹರಪನಹಳ್ಳಿ ತಾಲ್ಲೂಕಿನ ರಾಗಿಮಸಲವಾಡ ಗ್ರಾಮದಲ್ಲಿ ಬರತಕ್ಕಂತಹ ಕೆಳಗಿನ ಷೆಡ್ಯೂಲ್‌ನಲ್ಲಿ ತೋರಿಸಿರುವ ಜಮೀನು ಸರ್ವೆ ನಂಬರ್ 58/ಬಿ1ನ ಮಾಲೀಕರಾದ ಇದೇ ದಾವಣಗೆರೆ ನಗರದ ಮೋತಿ ಲೇ ಔಟ್‌ನಲ್ಲಿನ ಡೋರ್ ನಂಬರ್ 1705/2ಬಿ ನಲ್ಲಿದ್ದು ಹಾಗೂ ಇವರ ಹಾಲಿ ವಿಳಾಸ ದಾವಣಗೆರೆಯ ನಿಟುವಳ್ಳಿ, ಲೆನಿನ್ ನಗರ, ದೇವರಾಜ್ ಅರಸ್ ಸೊಸೈಟಿ ಹತ್ತಿರ ಡೋರ್ ನಂಬರ್ 50/1ಪಿ ರಲ್ಲಿ ವಾಸವಿರುವ ಶ್ರೀಮತಿ ರೇಖಾ ಟಿ. ಕೋಂ. ಕರಿಬಸವರಾಜ (ತುಂಬಿನ ಕಟ್ಟೆ, ಹೊನ್ನೇನಹಳ್ಳಿ) ಇವರಿಂದ ಖರೀದಿಸಲು ನಿರ್ಧರಿಸಿದ್ದು, ಇದರಂತೆ ಷೆಡ್ಯೂಲ್ ಆಸ್ತಿಯ ಮಾಲೀಕತ್ವ ಹೊಂದಿದ ಶ್ರೀಮತಿ ರೇಖಾ ಟಿ. ಕೋಂ. ಕರಿಬಸವರಾಜರವರು ಕ್ರಯದ ಕರಾರು ಪತ್ರ ಬರೆದು ಕೊಟ್ಟಿರುತ್ತಾರೆ. ನನ್ನ ಕಕ್ಷಿದಾರರ ಈ ಕೆಳಕಂಡ ಷೆಡ್ಯೂಲ್ ಜಮೀನಿನ ಖರೀದಿಗೆ ಯಾರದಾದರೂ ಆಕ್ಷೇಪ, ತಂಟೆ-ತಕರಾರು ಅಥವಾ ಕ್ಲೈಮ್‌ಗಳಿದ್ದಲ್ಲಿ ತಮ್ಮ ಅಹವಾಲುಗಳನ್ನು ಈ ಜಾಹಿರಾತು ಪ್ರಕಟಣೆಯ ದಿನಾಂಕದಿಂದ ಏಳು ದಿವಸಗಳ ಒಳಗಾಗಿ ಕೆಳಕಂಡ ವಿಳಾಸಕ್ಕೆ ತಲುಪಿಸತಕ್ಕದ್ದು. ತಪ್ಪಿದಲ್ಲಿ ಸದರಿ ಷೆಡ್ಯೂಲ್ ಆಸ್ತಿಯನ್ನು ಖರೀದಿಸಲು ಯಾವುದೇ ಆಕ್ಷೇಪಗಳಿರುವುದಿಲ್ಲ ಎಂದು ಪರಿಗಣಿಸಿ ನನ್ನ ಕಕ್ಷಿದಾರರಾದ ಶ್ರೀ ಅರುಣ್‌ಕುಮಾರ್ ಜೆ. ಜಿ. ಬಿನ್ ಶ್ರೀ ಜಿ. ಜಯದೇವ ಇವರಿಗೆ ಶ್ರೀಮತಿ ರೇಖಾ ಟಿ. ಕೋಂ. ಕರಿಬಸವರಾಜರವರು ಬರೆದುಕೊಡುವ ಕ್ರಯಪತ್ರಕ್ಕೆ ಯಾವುದೇ ಬಂಧಕಾರಿಯಾಗುವುದಿಲ್ಲ ಹಾಗೂ ಮುಂದೆ ಆಗುವ ತಂಟೆ-ತಕರಾರುಗಳಿಗೆ ನೀವುಗಳೇ ಜವಾಬ್ದಾರರಾಗಿರುತ್ತೀರಿ ಎಂದು ತಿಳಿಸಿ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆಯಾಗಿರುತ್ತದೆ.

**ಷೆಡ್ಯೂಲ್** : ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ತೆಲಗಿ ಹೋಬಳಿಯ ರಾಗಿಮಸಲವಾಡ ಗ್ರಾಮದ ವ್ಯಾಪ್ತಿಗೆ ಸೇರಿದ ಜಮೀನು ಸರ್ವೆ ನಂಬರ್ 58/ಬಿ1, ಇದರ ಒಟ್ಟು ವಿಸ್ತೀರ್ಣ 06-00 ಎಕರೆ, 00-40 ಸೆಂಟ್ಸ್ ಇದಕ್ಕೆ ಚಕ್ಕು ಬಂದಿ : ಪೂರ್ವಕ್ಕೆ : ಈಡಿಗರ ಲಕ್ಷ್ಮಣ ಇವರ ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಈಡಿಗರ ಕರಿಯಪ್ಪನವರ ಜಮೀನು, ದಕ್ಷಿಣಕ್ಕೆ : ಭೋವಿ ತಿಮ್ಮಪ್ಪನ ಜಮೀನು.

ದಿನಾಂಕ : 29.06.2021, ಸ್ಥಳ : ದಾವಣಗೆರೆ

**ಅರುಣ್ ಬಿ. ಕೌಜಲಗಿ,** ವಕೀಲರು,
ಡೋ. ನಂ. 2539/2, ಮೊದಲನೇಯ ಮಹಡಿ, ಜಗಳೂರು ಪಾಪಣ್ಣಾ ಬಿಲ್ಡಿಂಗ್, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ. ಫೋನ್ ನಂ. : 94487 29063

# ಬೆಲೆ ಏರಿಕೆ : ಜೆಡಿಎಸ್ ಪ್ರತಿಭಟನೆ




ದಾವಣಗೆರೆ, ಜೂ.28- ಬೆಲೆ ಏರಿಕೆ ನಿಯಂತ್ರಣ, ಕೋವಿಡ್ ಸೋಂಕಿನಿಂದ ಮೃತಪಟ್ಟ ಕುಟುಂಬಗಳಿಗೆ ಹೆಚ್ಚಿನ ಪರಿಹಾರಕ್ಕೆ ಆಗ್ರಹಿಸಿ, ಜೆಡಿಎಸ್ ಪಕ್ಷದ ಜಿಲ್ಲಾ ಘಟಕದ ಪದಾಧಿಕಾರಿಗಳು, ಕಾರ್ಯಕರ್ತರು ಇಂದು ನಗರದ ಉಪವಿಭಾಗಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಲಾಕ್‌ಡೌನ್‌ನಿಂದ ಬಾಧಿತರಾಗಿ ಸಂಕಷ್ಟದಿಂದ ರಾಜ್ಯದ ಜನತೆ ಬಳಲುತ್ತಿರುವ ಸಮಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನ ಸಾಮಾನ್ಯರ, ರೈತ, ಕಾರ್ಮಿಕರ, ಬದುಕಿನ ಮೇಲೆ ಬರೆ ಎಳೆಯುವ ರೀತಿ ಇಂಧನ ಬೆಲೆ ಏರಿಕೆ ಮಾಡಿರುವುದು ಖಂಡನೀಯ. ವಿದ್ಯುತ್ ದರ, ರಸಗೊಬ್ಬರ ಮುಂತಾದವುಗಳನ್ನು ಬೆಲೆ ಗಗನಕ್ಕೇರಿಸಿ, ಜನ ಜೀವನವನ್ನು ಅಸ್ತವ್ಯಸ್ತಗೊಳ್ಳುವಂತೆ ಮಾಡಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಕೊರೊನಾ ಎರಡನೇ ಅಲೆಯಲ್ಲಿ ರಾಜ್ಯದಲ್ಲಿ ಸಾವಿರಾರು ಕುಟುಂಬಗಳಲ್ಲಿನ ದುಡಿಯುವ ವ್ಯಕ್ತಿ ಸಾವನ್ನಪ್ಪಿ, ಕುಟುಂಬಸ್ಥರು ನಿರ್ಗತಿಕರಾಗಿ ಬೀದಿ ಪಾಲಾಗಿದ್ದಾರೆ. ಅಲ್ಲದೇ, ಎಷ್ಟೋ ಕುಟುಂಬಗಳಲ್ಲಿ ತಂದೆ, ತಾಯಿಗಳು ಮರಣ ಹೊಂದಿ ಮಕ್ಕಳು ಅನಾಥರಾಗಿದ್ದಾರೆ. ಅದೇ ರೀತಿ ಲಾಕ್‌ಡೌನ್‌ನಿಂದ ರೈತ ಸಮುದಾಯ ತಾನು ಬೆಳೆದ ಆಹಾರ ಸಾಮಗ್ರಿ, ತರಕಾರಿ ಮತ್ತು ಹಣ್ಣು ಹಂಪಲಗಳನ್ನು ಕಟಾವು ಮಾಡದೇ, ಖರೀದಿ ಮಾಡಲು ವರ್ತಕರು ಮುಂದೆ ಬರದೇ ತಮ್ಮ ಸರ್ವಸ್ವವನ್ನೂ ಒತ್ತೆ ಇಟ್ಟು ಬೆಳೆದ ಫಸಲನ್ನು ಹೊಲದಲ್ಲಿ ಕೊಳೆಯಲು ಬಿಟ್ಟು ನಿರ್ಗತಿಕರಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವೇಚನೆ ಇಲ್ಲದೇ ಶ್ರೀಸಾಮಾನ್ಯ ಮತ್ತು ರೈತ ಸಮುದಾಯ ಒಳಗೊಂಡಂತೆ ಇತರರು ಬಳಸುವ ದಿನನಿತ್ಯ ಮತ್ತು ದೈನಂದಿನ ಬಳಕೆಯ ಪದಾರ್ಥಗಳ ಮತ್ತು ಗೊಬ್ಬರ ಬೆಲೆಯನ್ನು ಗಗನಕ್ಕೆ ಏರಿಸಿರುವುದು ಖಂಡನೀಯ ಎಂದು ತರಾಟೆಗೆ ತೆಗೆದುಕೊಂಡರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾ ಅಧ್ಯಕ್ಷ ಬಿ. ಚಿದಾನಂದಪ್ಪ, ಹೊದಿಗೆರೆ ರಮೇಶ್, ಜೆ. ಅಮಾನುಲ್ಲಾ ಖಾನ್ ಸೇರಿದಂತೆ ಇತರರು ಭಾಗವಹಿಸಿದ್ದರು.


# ಲಸಿಕೆ ನೀಡುವಲ್ಲಿ ತಾರತಮ್ಯ : ಎಸ್ಸೆಸ್ ಆಕ್ರೋಶ

ದಾವಣಗೆರೆ, ಜೂ.28- ಜನರು ಲಸಿಕೆ ಸಿಗದೇ ಸಾಯ್ತಾ ಇದ್ದಾರೆ. ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಕಷ್ಟಕ್ಕೆ ಸ್ಪಂದಿಸುವುದು ಬಿಟ್ಟು ಇದರಲ್ಲಿಯೂ ರಾಜಕೀಯ ಮಾಡುತ್ತಿದ್ದಾರೆ. ಅವರಿಗೆ ತಕ್ಕ ಪಾಠ ಕಲಿಸಬೇಕಿದೆ. ಜನರೇ ಪಾಠ ಕಲಿಸಬೇಕು ಅಷ್ಟೇ ಎಂದು ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡಾ. ಶಾಮನೂರು ಶಿವಶಂಕರಪ್ಪ ಮತ್ತು ಶಾಮನೂರು ಮಲ್ಲಿಕಾರ್ಜುನ್ ಅವರು ನೀಡುತ್ತಿರುವ ಕೊರೊನಾ ಉಚಿತ ಲಸಿಕಾ ಶಿಬಿರವು ಕೆ.ಬಿ. ಬಡಾವಣೆಯಲ್ಲಿ ಇಂದು ಏರ್ಪಡಾಗಿದ್ದ ಸಂದರ್ಭದಲ್ಲಿ ಶಿಬಿರಕ್ಕೆ ಭೇಟಿ ನೀಡಿದ್ದ ಅವರು, ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದರು.

ನಾವು ಈ ಭಾಗದಲ್ಲಿ ನಾಲ್ಕು ನೂರು ಲಸಿಕೆ ನೀಡಿದ್ದೇವೆ. ಸರ್ಕಾರದವರು ವ್ಯಾಕ್ಸಿನ್ ನೀಡುತ್ತೇವೆ ಎಂಬ ಭರವಸೆ ನೀಡಿದ್ದರು. ಆದರೆ, ಈ ಭಾಗದ ಕಾರ್ಪೊರೇಟರ್ ಹೇಳಿದರೆಂದು ಸಂಸದರು ಸರ್ಕಾರ ನೀಡಬೇಕಾದ ವ್ಯಾಕ್ಸಿನ್ ನೀಡಲು ತಡೆದಿದ್ದಾರೆಂದು ದೂರಿದರು.

ಲಸಿಕೆ ನೀಡದ ಕಾರಣ ಜನರು ಸಮಸ್ಯೆ ಅನುಭವಿಸುವಂತಾಗಿದೆ. ಈ ವಾರ್ಡ್‌ನ ಕಾರ್ಪೊರೇಟರ್ ಆಗಿರುವ ಮೇಯರ್, ಸಂಸದ ಸಿದ್ದೇಶ್ವರ ಬಳಿ ಹೋಗಿ ಅತ್ತು, ಕರೆದು



ಅಧಿಕಾರಿಗಳನ್ನು ಹೆದರಿಸಿ ಸರ್ಕಾರದಿಂದ ನೀಡುತ್ತೇವೆ ಎಂದಿದ್ದ ಲಸಿಕೆ ಬಾರದಂತೆ ತಡೆಯಲಾಗಿದೆ. ಇದಕ್ಕೆ ಸಿದ್ದೇಶ್ವರ ಒಪ್ಪಿದ ಕಾರಣ ಬಂದಿಲ್ಲ. ಜನರು ಬೆಳಿಗ್ಗೆಯಿಂದಲೂ ಕಾಯುತ್ತಿದ್ದಾರೆ. ಜನರ ಪ್ರಾಣ ಉಳಿಸುವ ಲಸಿಕೆ ನೀಡುವಂತಹ ಕಾರ್ಯದಲ್ಲಿ ರಾಜಕೀಯ ಮಾಡಿದವರಿಗೆ ಜನರು ಮುಂದಿನ ದಿನಗಳಲ್ಲಿ ಉತ್ತರ ನೀಡಲಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ಕಾಂಗ್ರೆಸ್ ಮುಖಂಡ ಕೆ.ಜಿ. ಶಿವಕುಮಾರ್, ಎಸ್ಸೆಸ್ ಅವರು 200 ಲಸಿಕೆ ನೀಡುವುದಾಗಿ ಹೇಳಿದ್ದರು. ಅದರಂತೆ ಬಂದಿವೆ. ಆದರೆ, ಕಾರ್ಪೊರೇಟರ್ ಹಾಗೂ ಸಂಸದರು ಅಧಿಕಾರಿಗಳನ್ನು ಹೆದರಿಸಿ ಸರ್ಕಾರದಿಂದ ನೀಡುತ್ತೇವೆ ಎಂದಿದ್ದ 300 ಲಸಿಕೆ ನೀಡದಂತೆ ತಡೆದಿದ್ದಾರೆ. ಶಾಸಕರು ಜನರ ಜೀವ ಉಳಿಸಲು ಮುಂದಾದರೆ, ಬಿಜೆಪಿಯವರು ಜನರ ಜೀವ ತೆಗೆಯಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.

ಜನರು ಹೆಚ್ಚಾಗಿರುವ ಕಾರಣ ಶಾಮನೂರು ಶಿವಶಂಕರಪ್ಪನವರು 200 ಲಸಿಕೆ ವ್ಯವಸ್ಥೆ ಮಾಡುವ ಮೂಲಕ ಜನರ ಸಮಸ್ಯೆಗೆ ಸ್ಪಂದಿಸಿದ್ದಾರೆ. ಇಂತಹ ವಿಚಾರಗಳಲ್ಲಿ ರಾಜಕೀಯ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಸದಸ್ಯ ದೊಗ್ಗಳ್ಳಿ ಬಸವರಾಜ್, ಮಾಜಿ ಸದಸ್ಯ ಕಿರುವಾಡಿ ಸೋಮಶೇಖರ್, ಉದ್ಯಮಿ ಕೋಗುಂಡಿ ಬಕ್ಕೇಶ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಸೇವಾದಳದ ಜಿಲ್ಲಾಧ್ಯಕ್ಷ ಡೋಲಿ ಚಂದ್ರು, ರುದ್ರೇಶ್, ಸಿರಿಗೆರೆ ರುದ್ರೇಶ್, ವಿಲಾಸ್, ಭುವ ಪ್ರಕಾಶ್, ಐನಳ್ಳಿ ವೀರಣ್ಣ, ಶರತ್, ವೀರೇಶ್ ಮೊಬೈಲ್, ಪುನೀತ್, ರಾಕಿ, ಜೆಡಿಎಸ್ ಮುಖಂಡರುಗಳಾದ ವೀರಭದ್ರಸ್ವಾಮಿ, ರಾಜೇಶ್, ಪ್ರವೀಣ್ ಫಾರ್ಮ, ಜೆ.ಜೆ.ಎಂ.ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ॥ ಮುರುಗೇಶ್, ಗೋಪಾಲಕೃಷ್ಣ ಮತ್ತು ಸಿಬ್ಬಂದಿ ವರ್ಗದವರು ಮತ್ತಿತರರಿದ್ದರು.

## ಜು.19, 22ರಂದು ಎಸ್ಸೆಸ್ಸೆಲ್ಸಿ ಪರೀಕ್ಷೆ

**(1ನೇ ಪುಟದಿಂದ)** ಅಂದರೆ ಒಟ್ಟಾರೆ ಮೂರು ವಿಷಯಗಳಿಂದ 120 ಪ್ರಶ್ನೆಗಳಿಗೆ 3 ಗಂಟೆಗಳಲ್ಲಿ ಉತ್ತರ ನೀಡಬೇಕು. ವಿದ್ಯಾರ್ಥಿಗಳ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಮೊದಲನೇ ದಿನಕ್ಕೂ ಎರಡನೇ ದಿನಕ್ಕೂ ಮೂರು ದಿನಗಳ ಬಿಡುವು ನೀಡಲಾಗಿದೆ.

ಈ ಬಾರಿ ಸರಳ ಪರೀಕ್ಷಾ ಕ್ರಮವನ್ನು ಅನುಸರಿಸುತ್ತಿದ್ದರೂ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಪಾವಿತ್ರ್ಯತೆಯನ್ನು ಹಾಗೆಯೇ ಕಾಪಾಡಿಕೊಂಡು ಬರುವುದಾಗಿ ತಿಳಿಸಿದರು. ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಕೇಂದ್ರಗಳ ಆಸುಪಾಸಿನಲ್ಲಿ ಜನದಟ್ಟಣೆ ಸೇರಬಾರದೆಂಬ ಉದ್ದೇಶದಿಂದ ಸೆಕ್ಷನ್ 144ನ್ನು ಜಾರಿಗೊಳಿಸಲಾಗುವುದು.

ವಿದ್ಯಾರ್ಥಿಗಳು ಯಾವುದೇ ಭಯಭೀತಿ ಇಲ್ಲದೆ, ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಬೇರೆ ಊರುಗಳಿಗೆ ಹೋಗಿರುವ ವಿದ್ಯಾರ್ಥಿಗಳು ತಮ್ಮ ಸಮೀಪದ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದ್ದು 10 ಸಾವಿರ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಲಿದ್ದಾರೆ. ಜೂನ್ 30 ರಂದು ವಿದ್ಯಾರ್ಥಿಗಳ ಹಾಲ್ ಟಿಕೆಟ್‌ಗಳನ್ನು ಶಾಲೆಗಳಿಗೆ ಕಳುಹಿಸಲಾಗುವುದು.

ಕೊರೊನಾ ಸೋಂಕಿಗೊಳಗಾಗಿರುವ ವಿದ್ಯಾರ್ಥಿ ಪರೀಕ್ಷೆ ಬರೆಯಲು ಬಯಸಿದರೆ ಪ್ರತ್ಯೇಕ ಕೊಠಡಿಯಲ್ಲಿ ಅವಕಾಶ ಕಲ್ಪಿಸಲು ತೀರ್ಮಾನಿಸಲಾಗಿದೆ.

ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಜುಲೈ ಎರಡನೇ ವಾರದಲ್ಲಿ ಪ್ರಕಟವಾಗಲಿದೆ. ಪರೀಕ್ಷೆ ಮಾರ್ಗಸೂಚಿಗಳನ್ನು ಜಿಲ್ಲಾ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಫಲಿತಾಂಶದ ಬಗ್ಗೆ ವಿದ್ಯಾರ್ಥಿಗಳಿಗೆ ಅಸಮಾಧಾನವಿದ್ದಲ್ಲಿ, ಅವರು ಪ್ರತ್ಯೇಕವಾಗಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗುವುದು ಎಂದರು.

## 2-ಡಿಜಿ ಔಷಧಿ ಬಿಡುಗಡೆ

**(1ನೇ ಪುಟದಿಂದ)** ಔಷಧಿ ಬಿಡುಗಡೆ ಮಾಡಲಾಗುವುದು. ನಂತರ ದೇಶದ ಇತರೆ ಭಾಗಗಳಿಗೂ ಔಷಧಿ ಬಿಡುಗಡೆ ಮಾಡಲಾಗುವುದು ಎಂದು ಕಂಪನಿ ತಿಳಿಸಿದೆ. 2ಡಿಜಿ ಬ್ರಾಂಡ್ ಹೆಸರಿನಲ್ಲಿ ಔಷಧಿ ಬಿಡುಗಡೆ ಮಾಡಲಾಗುವುದು. ಲಘು ಹಾಗೂ ಮಧ್ಯಮ ತೀವ್ರತೆ ಇರುವ ಸೋಂಕಿಗೆ ಔಷಧಿ ಉಪಯುಕ್ತವಾಗಿದೆ ಎಂದು ಕಂಪನಿ ತಿಳಿಸಿದೆ.

ಕಳೆದ ಮೇ 1ರಂದು ಈ ಔಷಧಿಯನ್ನು ಕೊರೊನಾಗೆ ಚಿಕಿತ್ಸೆ ನೀಡಲು ತುರ್ತು ಅನುಮತಿ ನೀಡಲಾಗಿತ್ತು. ಈ ಔಷಧಿಯನ್ನು ಡಾ. ರೆಡ್ಡೀಸ್ ಹಾಗೂ ಇನ್‌ಮಾಸ್ ಮತ್ತು ಡಿ.ಆರ್.ಡಿ.ಒ.ಗಳು ಜಂಟಿಯಾಗಿ ಅಭಿವೃದ್ಧಿ ಪಡಿಸಿವೆ.

## ಬ್ಲಾಕ್ ಫಂಗಸ್ ಪ್ರಕರಣ

**(1ನೇ ಪುಟದಿಂದ)** ಸೋಂಕಿತರು. ಶೇ.64.11ರಷ್ಟು ಜನರು ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ಸಚಿವರು ಹೇಳಿದ್ದಾರೆ.

ಭಾರತದಲ್ಲಿ ಇದುವರೆಗೂ ನೀಡಲಾಗಿರುವ ಕೊರೊನಾ ಲಸಿಕೆಯ ಪ್ರಮಾಣ ಅಮೆರಿಕ ಕ್ಕಿಂತಲೂ ಹೆಚ್ಚಾಗಿದೆ ಎಂದೂ ಅವರು ಹೇಳಿದ್ದಾರೆ.

## ಜಿಎಂ ಟ್ರಸ್ಟ್‌ನ ಆಕ್ಸಿಜನ್ ಪ್ಲಾಂಟ್ ಸೇವೆಗೆ ಸಮರ್ಪಣೆ

**(1ನೇ ಪುಟದಿಂದ)** ಅನುಕೂಲ ಮಾಡಲಾಗಿದೆ. ಜೀವ ಉಳಿದರೆ ಸಮಾಜದಲ್ಲಿ ಸಾಧನೆ ಸಾಕಷ್ಟು ಮಾಡಬಹುದು ಎಂದು ಸಿದ್ದೇಶ್ವರ ಅವರು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಮತ್ತು ನಗರ ಅಭಿವೃದ್ಧಿ ಸಚಿವ ಎಸ್.ಎ. ಭೈರತಿ ಬಸವರಾಜ್ ಮಾತನಾಡಿ, ಮನುಷ್ಯ ಎಷ್ಟು ದಿನ ಬದುಕುತ್ತಾರೆ ಎಂಬುದು ಮುಖ್ಯವಲ್ಲ ಬದುಕಿದ್ದಾಗ ಜೀವನದಲ್ಲಿ ಏನು ಸಾಧನೆ ಮಾಡಿದ್ದೇವೆ ಎಂಬುದು ಬಹುಮುಖ್ಯ ವಾಗಿರುತ್ತದೆ. ಅಂತಹ ಸಾಧನೆ ಎಂ.ಪಿ ಯವರು ಮಾಡಿ ತೋರಿಸುವ ಮೂಲಕ ಈ ಭಾಗದ ಜನರಿಗೆ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ.

ಕೊರೊನಾದಿಂದ ಮರಣ ಹೊಂದಿದ ಬಡ ಕುಟುಂಬದ ಸದಸ್ಯರು ನರಳುವಂತಾಗಿದೆ. ಇದನ್ನು ತಡೆಗಟ್ಟಲು ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಮೃತ ಕುಟುಂಬಸ್ಥರಿಗೆ 1 ಲಕ್ಷ ಪರಿಹಾರ ನೀಡಲು ಮುಂದಾಗಿದ್ದು, ವರದಿಯನ್ನು ತರಿಸಿಕೊಂಡು ಅವರಿಗೆ ಪರಿಹಾರವನ್ನು ತಲುಪಿಸುವ ಕೆಲಸವನ್ನು ಶೀಘ್ರವಾಗಿ ಮಾಡಲಾಗುತ್ತದೆ. ನಾನು ಕೂಡ ವೈಯಕ್ತಿಕವಾಗಿ ನನ್ನ ಕ್ಷೇತ್ರದ ಜನತೆಗೆ 1 ಕೋಟಿ 15 ಲಕ್ಷ ಹಣದ ಚೆಕ್ ಮತ್ತು 1 ಲಕ್ಷ ಆಹಾರದ ಕಿಟ್ ವಿತರಣೆ ಮಾಡಿದ್ದೇನೆ.

ಶಾಸಕ ಎಸ್. ರಾಮಪ್ಪ ಮಾತನಾಡಿ, ನಗರದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಆಕ್ಸಿಜನ್ ಪ್ಲಾಂಟ್ ನಿರ್ಮಾಣ ಕಾರ್ಯವನ್ನು ಎರಡು ತಿಂಗಳ ಮೊದಲೇ ಮಾಡಿದ್ದಾರೆ. ಸಿದ್ದೇಶ್ವರ ಕುಟುಂಬದ ಸದಸ್ಯರು ಆಕ್ಸಿಜನ್ ಪ್ಲಾಂಟ್ ನಿರ್ಮಾಣ ಮಾಡಿರುವುದಕ್ಕೆ ಅಭಿನಂದನೆಗಳು. ನಗರದ ಸಾರ್ವಜನಿಕ ಆಸ್ಪತ್ರೆಯನ್ನು 100 ಬೆಡ್ ಆಸ್ಪತ್ರೆಯನ್ನಾಗಿ ಮಾಡಬೇಕು ಹಾಗೂ ಹರಪನಹಳ್ಳಿ ರಸ್ತೆಯಲ್ಲಿ ಇರುವ ಸೇತುವೆಗೆ ಇನ್ನೊಂದು ಸೇತುವೆ ನಿರ್ಮಾಣಕ್ಕೆ ಆದ್ಯತೆ ಕೊಡಬೇಕು ಎಂದು ಸಚಿವರನ್ನು ಕೇಳಿಕೊಂಡರು.

ದಾವಣಗೆರೆ ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ಜಿಲ್ಲೆಯಲ್ಲಿ ಕೊರೊನಾ ಸಮಯದಲ್ಲಿ ಆಕ್ಸಿಜನ್ ಮತ್ತು ವೆಂಟಿಲೇಶನ್ ಕೊರತೆ ಬಹಳ ಇತ್ತು. ಇದರಿಂದಾಗಿ ಸಾರ್ವಜನಿಕರ ಕಷ್ಟ ಹೇಳತೀರದು. ಹಿಂದೆ ರಾಜ್ಯದ ಆರೋಗ್ಯ ಸಚಿವ ಸಿದ್ದವೀರಪ್ಪನವರ ಕಾಲದಲ್ಲಿ ಆರೋಗ್ಯ ಇಲಾಖೆಗೆ ಹೆಚ್ಚು ಒತ್ತನ್ನು ನೀಡಿದ್ದರು. ಅದರಂತೆ ಜಿಲ್ಲೆಯ ಸಚಿವರು, ಸಂಸದರು, ಜಿಲ್ಲಾಧಿಕಾರಿಗಳು ಎಲ್ಲಾ ತಾಲ್ಲೂಕಿಗೆ ಪ್ರವಾಸ ಕೈಗೊಂಡು ಸಾಕಷ್ಟು ಕೊರೊನಾ ತಡೆಗಟ್ಟಲು ಶ್ರಮವಹಿಸಿ ಕೆಲಸ ಮಾಡಿದರು ಎಂದು ಶ್ಲಾಘಿಸಿದರು.


ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಪಂ ಕಾರ್ಯನಿರ್ವಾಹಣಾಧಿಕಾರಿ ಮಹಾಂತೇಶ್. ಎಸ್.ಪಿ. ರಿಷ್ಯಂತ್, ಜಿಲ್ಲಾ ಉಪವಿಭಾಗಧಿಕಾರಿ ಮಮತಾ ಹೊಸಗೌಡ್ರು, ಜಿಲ್ಲಾ ಆರೋಗ್ಯ ಅಧಿಕಾರಿ ನಾಗರಾಜ್ , ನಟರಾಜ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್. ಲಕ್ಷ್ಮಿ , ಎಎಸ್ಪಿ ಬಿರಾದಾರ, ಡಿವೈಎಸ್ಪಿ ನರಸಿಂಹರಾಜು, ಸಿಪಿಐ ಸತೀಶ್‌ಕುಮಾರ್, ಡಾ. ಹನುಮನಾಯ್ಕ್, ಡಾ. ಚಂದ್ರಮೋಹನ್, ಡಾ. ಸವಿತಾ, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ಹನುಮಂತಪ್ಪ, ರಜನಿಕಾಂತ್ ಮತ್ತಿತರರು ಹಾಜರಿದ್ದರು.

## 'ಸಾಲ'ದ ಪ್ಯಾಕೇಜ್

**(1ನೇ ಪುಟದಿಂದ)** ಕಲ್ಪಿಸಲು ಹೆಚ್ಚುವರಿಯಾಗಿ 19,041 ಕೋಟಿ ರೂ. ಒದಗಿಸಲಾಗುವುದು. ಎಲೆಕ್ಟ್ರಾನಿಕ್ಸ್ ಉತ್ಪಾದಕರಿಗೆ ಉತ್ಪಾದನಾ ಉತ್ತೇಜನ ನೀಡಲಾಗುವುದು. ಸರಕು ರಫ್ತಿಗೆ 88 ಸಾವಿರ ಕೋಟಿ ರೂ.ಗಳ ವಿಮೆ ನೀಡಲಾಗುವುದು.


ಸಣ್ಣ ಉದ್ಯಮಿಗಳಿಗೆ ಸರ್ಕಾರದ ಗ್ಯಾರಂಟಿಯೊಂದಿಗೆ 3 ಲಕ್ಷ ಕೋಟಿ ರೂ.ಗಳ ಬ್ಯಾಂಕ್ ಸಾಲ ನೀಡಲಾಗುತ್ತಿದೆ. ಇದನ್ನು 4.5 ಲಕ್ಷ ಕೋಟಿ ರೂ.ಗಳಿಗೆ ವಿಸ್ತರಿಸಲಾಗಿದೆ ಎಂದು ಸೀತಾರಾಮನ್ ಹೇಳಿದ್ದಾರೆ.

ಇದರ ಜೊತೆಗೆ ಕೊರೊನಾದಿಂದ ಪೀಡಿತವಾದ ವಲಯಗಳಿಗೆ 1.1 ಲಕ್ಷ ಕೋಟಿ ರೂ.ಗಳ ಸಾಲ ಯೋಜನೆ ಪ್ರಕಟಿಸಲಾಗಿದೆ. ಇದರಲ್ಲಿ 50 ಸಾವಿರ ಕೋಟಿ ರೂ.ಗಳನ್ನು ಆರೋಗ್ಯ ವಲಯಕ್ಕೆ ಸಾಲವಾಗಿ ನೀಡಲಾಗುವುದು. ಪ್ರವಾಸೋದ್ಯಮ ಹಾಗೂ ಹೋಟೆಲ್ ವಲಯ ಉಳಿದ ಸಾಲ ಪಡೆಯಲಿದೆ.









## ಜನರಿಗೆ ಹಣ ಕೊಡಿ

**(1ನೇ ಪುಟದಿಂದ)** ಸಾಲಗಳನ್ನು ನೀಡುತ್ತಿದ್ದಾರಷ್ಟೇ ಎಂದು ಕಾಂಗ್ರೆಸ್ ವಕ್ತಾರ ಗೌರವ್ ವಲ್ಲಭ್ ಹೇಳಿದ್ದಾರೆ.

ಜನರು ಸಾಲ ಪಡೆಯಲು ಉತ್ತೇಜನ ನೀಡುವ ಬದಲು, ಅವರಿಗೆ ನೇರವಾಗಿ ಹಣ ನೀಡುವ ಮೂಲಕ ಆರ್ಥಿಕತೆಯಲ್ಲಿ ಬೇಡಿಕೆ ಹೆಚ್ಚಿಸಬೇಕು ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

ಕುಸಿಯುತ್ತಿರುವ ಸರಕುಗಳ ಬೇಡಿಕೆ, ಜಿ.ಡಿ.ಪಿ. ಕುಸಿತ, ಹಣದುಬ್ಬರ ಹಾಗೂ ನಿರುದ್ಯೋಗದ ಬಗ್ಗೆ ಹಣಕಾಸು ಸಚಿವೆ ಏನೂ ಮಾತನಾಡಿಲ್ಲ. ಉದ್ಯೋಗ ಸೃಷ್ಟಿಯ ಬಗ್ಗೆ ಸರ್ಕಾರದ ಬಳಿ ಸ್ಪಷ್ಟ ಯೋಜನೆ ಇಲ್ಲ ಎಂದವರು ತರಾಟೆಗೆ ತೆಗೆದುಕೊಂಡಿದ್ದಾರೆ.

## ಬಿಎಸ್‌ವೈ ಪತ್ರ

**(1ನೇ ಪುಟದಿಂದ)** ಜನರ ಭಾವನೆಗೆ ಹತ್ತಿರವಾಗಿವೆ.

ಇತ್ತೀಚೆಗೆ ಇಂತಹ ಹೆಸರುಗಳ ಬದಲಾವಣೆಗೆ ಮುಂದಾಗಿರುವ ಪ್ರಯತ್ನ ಅಚ್ಚರಿ ತಂದಿದೆ ಎಂದಿದ್ದಾರೆ.

ಕಾಸರಗೋಡು ಜಿಲ್ಲೆಯ ಸ್ಥಳಗಳ ಹೆಸರು ಬದಲಾವಣೆಗೆ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದಿರುವ ಕೇರಳದ ಸಚಿವ ಎಂ.ವಿ. ಗೋವಿಂದನ್, ಇಂತಹ ಸುದ್ದಿ ಸಂಪೂರ್ಣ ಆಧಾರ ರಹಿತ ಎಂದಿದ್ದಾರೆ.




## ಕೋವಿಡ್‌ಗೆ ಆರು ಶಿಕ್ಷಕರು ಬಲಿ



ಹೊನ್ನಾಳಿ

ಹೊನ್ನಾಳಿ, ಜೂ.28- ತಾಲ್ಲೂಕಿನ ಕೂಲಂಬಿಯ ಸರ್ವೋದಯ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಅರಕೆರೆ ಗಜೇಂದ್ರ (44) ಅವರು ಇಂದು ಬೆಳಿಗ್ಗೆ ಕೋವಿಡ್‌ಗೆ ಬಲಿಯಾಗಿರುವುದಾಗಿ ವರದಿಯಾಗಿದೆ.

ತಾಲ್ಲೂಕಿನಲ್ಲಿ ಈ ಹಿಂದೆ ಕೋವಿಡ್‌ನಿಂದ ಐವರು ಸಾವನ್ನಪ್ಪಿದ್ದು, ಗಜೇಂದ್ರ ಅವರ ಸಾವಿನಿಂದ ಒಟ್ಟು ಆರು ಜನರು ಮೃತಪಟ್ಟಂತಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರಾಜೀವ್ ತಿಳಿಸಿದ್ದಾರೆ.

ಕತ್ತಿಗೆ ಮುಖ್ಯ ಶಿಕ್ಷಕ ಪರಮೇಶ್ವರಪ್ಪ, ಚಿನ್ನಿಕಟ್ಟೆ ಉಮಾ ಪ್ರಗತಿ ಶಾಲೆಯ ಮುಖ್ಯ ಶಿಕ್ಷಕ ಮಹೇಶ್ವರಪ್ಪ, ಕೊಡಚಗೊಂಡನಹಳ್ಳಿಯ ಶ್ರೀಧರ್, ಚೀಲೂರು ರಾಷ್ಟ್ರೀಯ ಪ್ರೌಢಶಾಲೆಯ ಪ್ರಶಾಂತಕುಮಾರ್, ತಕ್ಕನಹಳ್ಳಿಯ ಶುಂಠಿ ಮಲ್ಲೇಶಪ್ಪ ಅವರುಗಳು ಕೋವಿಡ್‌ನಿಂದ ಮೃತಪಟ್ಟಿರುವುದಾಗಿ ಅವರು ವಿವರಿಸಿದ್ದಾರೆ.


## ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001.
96861 95327


## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ನಲ್ಲೂರು ಪಾಂಡುರಂಗ ಎನ್. ರೇವಣಕರ್**

ಮಾಲೀಕರು,
ನಲ್ಲೂರು ವಿಶ್ವಾಸ್ ಜ್ಯೂಯಲರ್ಸ್,
ನಲ್ಲೂರು ಪಾಂಡುರಂಗ ಜ್ಯೂಯಲರ್ಸ್, ದಾವಣಗೆರೆ.

ನಿಧನ : 29.06.2020

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಧರ್ಮಪತ್ನಿ : ಶ್ರೀಮತಿ ಶಕುಂತಲ ಪಾಂಡುರಂಗ ರೇವಣಕರ್
ಮಗ-ಸೊಸೆ : ರಾಜೇಶ್ ಮತ್ತು ಶ್ರೀಮತಿ ವಂದನ
ಮಗಳು-ಅಳಿಯ : ಶ್ರೀಮತಿ ವೀಣಾ ಮತ್ತು ರಘುವೀರ್
ಮಗಳು-ಅಳಿಯ : ಶ್ರೀಮತಿ ನಯನ ಮತ್ತು ಸಂಜಯ್
ಮಗ-ಸೊಸೆ : ಸಂತೋಷ್ ಮತ್ತು ಆಶಾ
ಮತ್ತು ಮೊಮ್ಮಕ್ಕಳು ಹಾಗೂ
ನಲ್ಲೂರು ಕುಟುಂಬ ವರ್ಗದವರು

## ಹುಟ್ಟುಹಬ್ಬದ ಶುಭಾಷಯಗಳು



ಹುಟ್ಟು ಹೋರಾಟಗಾರ,
ಹಿಂದುಳಿದ ವರ್ಗಗಳ ನಾಯಕ,
ಸಂಘಟನಾ ಚತುರ,
ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷರಾದ
**ಶ್ರೀ ಯಶವಂತರಾವ್ ಜಾಧವ್**
ಇವರಿಗೆ ಜನ್ಮದಿನದ ಶುಭಾಷಯಗಳು





**ಶ್ರೀ ನಾಗರಾಜ್ ಲೋಕಿಕೆರೆ**
ಜಿಲ್ಲಾಧ್ಯಕ್ಷರು, ಬಿಜೆಪಿ ರೈತ ಮೋರ್ಚಾ, ದಾವಣಗೆರೆ
ಹಾಗೂ ಅಭಿಮಾನಿಗಳ ಬಳಗ

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಹರಿಹರ ತಾಲ್ಲೂಕು, ನಿಟ್ಟೂರು ಗ್ರಾಮದ ವಾಸಿ, ಮಾಜಿ ಪ್ರಧಾನರಾದ
**ಕೆ. ಏಕಾಂತಪ್ಪ ಮತ್ತು ಮಕ್ಕಳು**
ಮಾಡುವ ವಿಜ್ಞಾಪನೆಗಳು.

ಆತ್ಮೀಯರೇ ... ನನ್ನ ಧರ್ಮಪತ್ನಿ

**ಶ್ರೀಮತಿ ಶಾರದಮ್ಮ**

ಇವರು, ದಿನಾಂಕ : 15.6.2021ರಂದು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಸಮಾರಾಧನೆ"ಯನ್ನು**

ದಿನಾಂಕ : 30.06.2021 ನೇ ಬುಧವಾರ ಬೆಳಗ್ಗೆ 10:00 ಕ್ಕೆ ನಿಟ್ಟೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.


ಇಂತಿ ದುಃಖತಪ್ತರು : ಕೆ. ಏಕಾಂತಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಅಳಿಯಂದಿರು, ಕುಂಬಾರ ವಂಶಸ್ಥರು ಮತ್ತು ಬಂಧು ಮಿತ್ರರು , ನಿಟ್ಟೂರು.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 21.06.2021ರ ಸೋಮವಾರ ನಿಧನರಾದ
ನಮ್ಮ ಆತ್ಮೀಯರಾದ
**ಶ್ರೀ ಬಿ. ಗಿರೀಶ್ (ಜಲ್ಲಿ)**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ವಿ. ಪ್ರಕಾಶ್, ಗುಡ್ಡಿ ಬೀಡಾ ಸ್ಟಾಲ್, ದಾವಣಗೆರೆ.
- ಸಂತೋಷ್‌ಕುಮಾರ್, ಎಸ್.ವಿ.ಟಿ. ಟೂರ್ಸ್ & ಟ್ರಾವೆಲ್ಸ್, ಎಸ್.ವಿ.ಟಿ. ಗ್ರೂಪ್ಸ್, ದಾವಣಗೆರೆ
- ಪಿ. ರಾಕೇಶ್, ಅಲಗೂರು ಪೇಂಟ್ಸ್, ದಾವಣಗೆರೆ.
- ಹೆಚ್.ಸಿ. ಈಶ್ವರ್, ಈಶ್ವರ್ ಫರ್ನೀಚರ್ಸ್ & ಇಂಟೀರಿಯರ್ಸ್, ದಾವಣಗೆರೆ.
- ಡಾ|| ಬಿ.ಜಿ. ಸತೀಶ್, ಅಮೃತ್ ಹಾಸ್ಪಿಟಲ್, ದಾವಣಗೆರೆ.
- ಉಮೇಶ್ವರಯ್ಯ ಟಿ.ಎಂ.ಕೆ. ಎಸ್.ಕೆ.ಬಿ. ಕಾಂಡಿಮೆಂಟ್ಸ್ & ಟ್ರೇಡರ್ಸ್, ದಾವಣಗೆರೆ.






61st birthday

ಹುಟ್ಟುಹಬ್ಬದ ಶುಭಾಶಯಗಳು



ಇಂದು ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ
ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ,
ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷರೂ ಹಾಗೂ ನಮ್ಮ ಆತ್ಮೀಯರೂ ಆದ
**ಶ್ರೀ ಯಶವಂತರಾವ್ ಜಾಧವ್**
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಶ್ರೀಯುತರಿಗೆ ಭಗವಂತನು ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಶುಭ ಹಾರೈಸುತ್ತೇವೆ.



ಶುಭ ಕೋರುವವರು :
**ಜಯಪ್ರಕಾಶ್ ಮಾಗಿ ಸ್ನೇಹ ಬಳಗ**
ಗುಜರಿ ಲೈನ್, ದಾವಣಗೆರೆ.
**ಮತ್ತು ಬಿಜೆಪಿ ಕಾರ್ಯಕರ್ತರು**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 28.06.2021ರ ಸೋಮವಾರ ನಿಧನರಾದ
ರೆಡ್ಡಿ ಸಮಾಜದ ಹಿರಿಯರೂ,
ನಮ್ಮ ಸೊಸೈಟಿಯ ಮಾಜಿ ಸಂಸ್ಥಾಪಕ ಅಧ್ಯಕ್ಷರೂ ಆದ
**ಶ್ರೀ ಎಸ್. ರಾಮಚಂದ್ರ ರೆಡ್ಡಿ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀ ಆರ್. ವೆಂಕಟರೆಡ್ಡಿ, ಅಧ್ಯಕ್ಷರು ಶ್ರೀ ವಿ. ಪ್ರಕಾಶ್, ಉಪಾಧ್ಯಕ್ಷರು
ನಿರ್ದೇಶಕರುಗಳು:
◆ ಶ್ರೀ ಟಿ.ಹೆಚ್. ರಾಜಶೇಖರ್ ◆ ಶ್ರೀ ಮೇಕಾ ಮುರುಳಿಕೃಷ್ಣ ◆ ಶ್ರೀ ಕೆ.ಬಿ. ನಾಗರಾಜ್ ◆ ಶ್ರೀ ನಾಗೇಂದ್ರ ಎನ್. ಲದ್ವಾ
◆ ಶ್ರೀಮತಿ ಎ. ಶ್ರೀದೇವಿ ತಿಮ್ಮಾರೆಡ್ಡಿ ◆ ಶ್ರೀ ಕೆ. ನಾರಾಯಣ ◆ ಶ್ರೀ ಬಿ. ವೆಂಕಟೇಶ್ವರ ರೆಡ್ಡಿ ◆ ಶ್ರೀ ಬಿ. ಯೋಗಿರೆಡ್ಡಿ
◆ ಶ್ರೀ ಬಿ. ವೆಂಕಟೇಶ್ವರ ರೆಡ್ಡಿ ◆ ರಾಜಾನಾಯಕ್ ◆ ಶ್ರೀಮತಿ ವೈ. ಸರೋಜ ವೆಂಕಟೇಶ್ವರ ರೆಡ್ಡಿ

**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,**
ಆಡಳಿತ ಕಛೇರಿ : ಹದಡಿ ರಸ್ತೆ, ದಾವಣಗೆರೆ-2. ಫೋನ್ : 08192 252222, 231870 ಶಾಖೆ : ವಿದ್ಯಾನಗರ ದಾವಣಗೆರೆ-6.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte